ಉತ್ತರ ಕನ್ನಡ ಜಿಲ್ಲೆ ಒಂದು ಮಾದರಿ ಜಿಲ್ಲೆಯಾಗಿ ಉಳಿಯಿತು. ಅಲ್ಲಿ ಯಾವುದೇ ಒಂದು ಘಟನೆಯು ನಡೆದಿಲ್ಲವೆಂದು ನಾವು ಬಹಳ ಅಭಿಮಾನದಿಂದ ಹೇಳಿದ್ದೇವೆ. ಇದು ಒಂದು ಮಾದರಿ ಜಿಲ್ಲೆಯಾಗಿ ಉಳಿಯಿತು. ಆದರೆ ದುರ್ದೈವದಿಂದ ಮೊನ್ನೇ ರಾಮ ನವಮಿ ದಿನ ಸಂಜೆ ಭಟ್ಕಳದಲ್ಲಿ 8-10ಸಾವಿರ ಜನರು ಮೆರವಣಿಗೆ ಹೊರಟು ಅದು ಮುಗಿಯುತ್ತಾ ಬಂದಿತ್ತು. ಆ ಸಮಯದಲ್ಲಿ ಕೆಲವು ತಿಳಿಗೇಡಿಗಳು ಮತ್ತು ಸಮಾಜ ಘಾತುಕ ಶಕ್ತಿಗಳು ಸೇರಿಕೊಂಡು ಆ ಮೆರವಣಿಗೆ ಮೇಲೆ ಕಲ್ಲು ಎಸೆದರು. ಕಲ್ಲು ತೂರಾಟ ಆದನಂತರ, ಆ ಮೆರವಣಿಗೆ ಮುಗಿದು ಜನರು ಮನೆಗೆ ಹೋಗುವಾಗ ಇವರ ಪೈಕಿ ಕೆಲವರು ಯಾವ ಕಡೆಯಿಂದ ಕಲ್ಲು ಬಂದವು ಆ ಮನೆಯ ಮೇಲೆ ಕಲ್ಲು ಎಸೆದರು. ಆದರಿಂದ ೪ ಮನೆಗಳ ಒಂದೆರಡು ಕಿಟಕಿಯ ಗಾಜುಗಳು ಒಡೆದವು . ನಾನು ಇಲ್ಲಿ ಆ 8-10 ಸಾವಿರ ಜನರನ್ನು ಮೆಚ್ಚಬೇಕಾಗುತ್ತದೆ. ಏಕೆಂದರೆ 10 ಸಾವಿರ ಜನರು ಸೇರಿದ್ದರೂ ಸಹ ಆ ಸಮಯದಲ್ಲಿ ಅವರು ಸಂಯಮ ಇಟ್ಟು ಕೊಳ್ಳಲಿಲ್ಲ ಎಂದರೆ ಬಹಳ ದೊಡ್ಡ ಅನಾಹುತವಾಗುತ್ತಿತ್ತು. ಈ ವಿಷಯ ಪೋಲಿಸ್‌ನವರಿಗೂ ಗೊತ್ತಿರಲಿಲ್ಲ. ಅಲ್ಲಿ ಯಾವುದೇ ಅನಾಹುತವಾಗಲಿಲ್ಲ. ಆದರೆ ಅದೇ ದಿನ ರಾತ್ರಿ ಒಬ್ಬ ರಿಕ್ಷಾ ಚಾಲಕನಿಗೆ 11-30ಕ್ಕೆ ಸ್ಟಾಬಿಂಗ್ ಆಯಿತು. ಅದರ ಪರಿಣಾಮವಾಗಿ ಅದೇ ದಿನ ರಾತ್ರಿ 7-8 ಜನ ಸೀರಿಯಸ್ಸಾಗಿ ಗಾಯಗೊಂಡರು. ಈಗಾಗಲೇ ಅವರು ಮಣಿಪಾಲ್ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ. ಕೆಲವು ಜನ ಬಟ್ಕಾಳದಲ್ಲಿ ಲೋಕೆಲ್ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ. ಒಬ್ಬರು ಹುಬ್ಬಳ್ಳಿಯ ಕೆ.ಎಂ.ಸಿ ಹಾಸ್ಪಿಟಲ್‌ನಲ್ಲಿ ಅಡ್ಮಿಟ್ ಆಗಿದ್ದಾರೆ. ಮಾನ್ಯ ಅಧ್ಯಕ್ಷರೇ, ಸಿಂಡಿಕೇಟ್ ಬ್ಯಾಂಕ್ ಮೇಲೆ ಒಂದು ಕುರುಡು ಬಾಂಬ್ ಹಾಕಿದಾಗ ಆ ಬ್ರಾಂಚ್‌ಗೆ ಸಾಕಷ್ಟು ಡ್ಯಾಮೇಜ್ ಆಗಿದೆ. ಒಬ್ಬ ಇಂಡಸ್ಟ್ರಿಯಲಿಸ್ಟ್‌ರವರ ಮನೆ ಹಿಂದೆ ಒಂದು ಬಾಂಬ್ ಹಾಕಿದರು. ನಂತರ ಅಲ್ಲಿ ಒಬ್ಬ ಸ್ಥಳೀಯ ವ್ಯಕ್ತಿಯಾದಂತಹ ಗಜಾನನ ನಾಯಕ್ ಎನ್ನುವವರ ಮನೆ ಮೇಲೆ ಒಂದು ಬಾಂಬ್ ಹಾಕಿದರು. ಅವರ ಮನೆಗೂ ಡ್ಯಾಮೇಜ್ ಆಗಿದೆ. ಪುನಃ 2ನೇ ತಾರೀಖು ರಾತ್ರಿ ಭಟ್ಕಳ ಸಮೀಪದಲ್ಲಿ ಮುಂದಳ್ಳಿ ಎಂದು ಒಂದು ಹಳ್ಳಿ ಇದೆ. ಅಲ್ಲಿ ಬೆಳಿಗ್ಗೆ ಹ್ಯಾಮ್ಲೆಟ್ ಮತ್ತು ನಾಸ್ತಾ ಹಳ್ಳಿಗೆ ಕೆಲವು ಜನ ಹೋಗಿ ಮಸೀದಿ ಮೇಲೆ ಕಲ್ಲು ಹೊಡೆದರು. ಮತ್ತು ಅಲ್ಲಿ ಇದ್ದ ಮೂರು ಮನೆಗಳನ್ನು ಸುಟ್ಟರು. ಆದರೆ ಸುದೈವದಿಂದ ಆ ಎರಡು ಮನೆಗಳಲ್ಲಿ ಜನ ಇರಲಿಲ್ಲ. ಅವರು ಭೀತಿಯಿಂದ ಭಟ್ಕಳ್‌ಗೆ ಬಂದಿದ್ದರು. ಈ ರೀತಿಯ ಅಶಾಂತಿ ವಾತಾವರಣ ಭಟ್ಕಳದಲ್ಲಿ ಮತ್ತು ಸುತ್ತಮುತ್ತಲಿನ ಹಳ್ಳಿಗಳ ನಿರ್ಮಾಣವಾಗಿದೆ. ನಾನು ಪುನಃ ನಿನ್ನೆ ಡಿಜಿಪಿಯವರ ಹತ್ತಿರ ಮಾತನಾಡಿದ್ದೇನೆ ಮತ್ತು ನಮ್ಮ ಎಸ್‌ಪಿಯವರ ಹತ್ತಿರವೂ ಕೂಡ ಸಾಕಷ್ಟು ಮಾತನಾಡಿದ್ದೇನೆ. ಇವತ್ತು ಅಲ್ಲಿ ಏನು ವಾತಾವರಣ ಇದೆಯೆಂದು ನನಗೆ ಗೊತ್ತಿಲ್ಲ. ಆದರೆ ನಿನ್ನೆ ಸಹ ಒಂದು ಸ್ಟಾಬಿಂಗ್ ಇನ್ಸಿಡೆಂಟ್ ಆಗಿದೆ. ನಾರಾಯಣ್ ಮೊಗೆರ ಎನ್ನುವವರ ಮೇಲೆ ನಿನ್ನೆ ಸ್ಟಾಬಿಂಗ್ ಆಗಿದೆ. ಹೀಗಾಗಿ ಇವತ್ತು ಸರ್ಕಾರ ಎಲ್ಲಾ ಹಂತದಲ್ಲೂ ಈ ಸಿಚ್ಯುಯೇಷನ್‌ನ್ನು ಕಂಟ್ರೋಲ್ ಮಾಡುವುದರಲ್ಲಿ ವಿಫಲವಾಗಿದೆ. ಇವತ್ತು ಜನರ ಮನಸ್ಸಿನಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ. ಇನ್ನೊಂದು ವಿಚಾರ, ಒಬ್ಬ ಸ್ಕೂಟರ್ ಮೇಲೆ ಹೋಗುವಾಗ, ಕೆಲವು ಅಮ್ಯೂನಿಷನ್‌ನ್ನು ಪೋಲೀಸರು ಸೀಜ್ ಮಾಡಿದ್ದಾರೆ. ಆದರೆ ಆ ಸ್ಕೂಟರ್ ಮೇಲೆ ಯಾರು ಇದ್ದರು ಅವರು ಓಡಿಹೋಗಿದ್ದಾರೆ. ಆದರೆ ನನ್ನ ಇನ್‌ಫರ್ಮೇಷನ್ ಪ್ರಕಾರ ಆ ಸ್ಕೂಟರ್ ಮಾಲೀಕ ದುಬೈನಲ್ಲಿ ಇರುತ್ತಾನೆ ಎನ್ನುವಂತಹ ಒಂದು ಸುದ್ದಿ ಇದೆ. ಹಾಗಾಗಿ ಮಾಲೀಕನ ಮೇಲೆ ದೂರು ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ, ಇವತ್ತು ಆ ಸ್ಕೂಟರ್‌ನಲ್ಲಿ ಹೋದವರು ಯಾರು? ಪೋಲಿಸ್‌ನವರು ಅವರನ್ನು ಏಕೆ ಹಿಡಿಯುವುದಕ್ಕೆ ಹೋಗಲಿಲ್ಲ ಎಂಬುದು ನಮಗೆ ಗೊತ್ತಾಗ ಬೇಕಾಗಿದೆ. ಹೀಗಾಗಿ ಅಲ್ಲಿ ಅಶಾಂತಿ ವಾತಾವರಣ ಮತ್ತು ಭಯದ ವಾತಾವರಣ ನಿರ್ಮಾಣವಾಗಿದೆ. ಪೋಲೀಸ್ ಇಲಾಖೆ ಇದನ್ನು ಕಂಟ್ರೋಲ್ ಮಾಡುವುದರಲ್ಲಿ ವಿಫಲವಾಗಿದೆ. ಹೀಗಾಗಿ ಈ ಬಾಂಬ್‌ಗಳು

ಕಂಟ್ರಿ ಬಾಂಬ್‌ಗಳು ಇರಬಹುದು, ಅಮ್ಯೂನಿಷನ್ ಇರಬಹುದು, ಇದು ಎಲ್ಲಿಂದ ಬಂತು? ಇದರ ಬಗ್ಗೆ ವಿಚಾರಣೆ ಆಗಬೇಕಾಗುತ್ತದೆ. ಇದರಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ. ಅವರ ಮೇಲೆ ಕಠೋರವಾದಂತಹ ಕ್ರಮವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇವತ್ತು ಸರ್ಕಾರದಿಂದ ಈ ಕ್ರಮ ಆಗಿಲ್ಲವೆಂದರೆ ಯಾರಿಗೂ ಸಹ ಯಾವ ಭಯ ಇಲ್ಲದ ಹಾಗೆ ಆಗುತ್ತದೆ. ಅವರು ಯಾವ ವರ್ಗದವರೆ ಇರಲಿ ಯಾವ ಸಮಾಜದವರೆ ಇರಲಿ. ಯಾವ ಜಾತಿಯವರೇ ಇರಲಿ ಈ ವಿಷಯದಲ್ಲಿ ಯಾರು ಕಾರಣಕರ್ತರಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳ ಬೇಕಾಗುತ್ತದೆ. ಇಲ್ಲ ಎಂದರೆ ಇದೇ ಪ್ರಕಾರ ಇಡೀ ರಾಜ್ಯದಲ್ಲಿ ಇದು ಬೆಳೆಯುತ್ತಾ ಹೋದರೆ ಬಹಳ ಕಷ್ಟ ಪರಿಸ್ಥಿತಿ ಬರಬಹುದು. ಇವತ್ತು ಕೋಮು ಸೌಹಾರ್ದತೆ, ಶಾಂತಿ, ಸುವ್ಯವಸ್ಥೆ ಕಾಪಾಡುವುದರಲ್ಲಿ ಸರ್ಕಾರ ಎಲ್ಲಾ ಹಂತದಲ್ಲೂ ವಿಫಲವಾಗಿದೆ. ಇವತ್ತು ಎಲ್ಲಾ ಕಡೆ ಬಾಂಬ್ ಬ್ಲಾಸ್ಟ್ ಆಗುತ್ತಿದೆ. ಮಾನ್ಯ ಅಧ್ಯಕ್ಷರೆ ಬೆಳಗಾಂನ ರೈಲ್ವೆ ಟ್ರಾಕ್ ಮೇಲೆ ಬಾಂಬ್ ಇತ್ತು. ಅವರನ್ನು ಕೇಳಿದರೆ ಇದು ಮಾರಾಠ ಅಲ್ಮೆಟ್ ಎಲಿಫೆಂಟರಿದು, ಅದು ಡಿಫೆನ್ಸ್ ಬಾಂಬ್ ಎಂದು ಹೇಳುತ್ತಾರೆ. ಅದು ಡಿಫೆನ್ಸ್ ಬಾಂಬ್ ಆದರೆ ಅಲ್ಲಿ ಏಕೆ ಬಂತು ? ರೈಲ್ವೆ ಟ್ರಾಕ್ ಮೇಲೆ ಏಕೆ ಬಂತು? ಏನು ಕಾರಣ? ಇವತ್ತು ಎಲ್ಲಾ ಕಡೆಯಿಂದ ಈ ರೀತಿಯ ಪರಿಸ್ಥಿತಿ ನಿರ್ಮಾಣವಾಗಿ, ಭಯದ ವಾತಾವರಣ ನಿರ್ಮಾಣವಾಗುತ್ತಿದೆ. ಅವರು ಹೇಳುತ್ತಾರೆ. ಆ ಬಾಂಬ್ ಎಕ್ಸ್‌ಪ್ಲಾಡ್ ಆಗುವುದಿಲ್ಲ. ಅದರಿಂದ ಏನು ತೊಂದರೆ ಇಲ್ಲ, ಅದರ ಬಗ್ಗೆ ಕಾಳಜಿ ಮಾಡುವ ಕಾರಣವಿಲ್ಲ, ನಾವು ಎಲ್ಲಾ ಸುವ್ಯವಸ್ಥೆ ಮಾಡಿದ್ದೇವೆ, ಅದು ಒಂದು ಕಂಟ್ರಿ ಬಾಂಬ್ ಅದರಿಂದ ಯಾವ ಪ್ರಾಪರ್ಟಿಗೂ ಡ್ಯಾಮೇಜ್ ಆಗಿಲ್ಲ ಎಂದು ಹೇಳುತ್ತಾರೆ. This is not the answer I want from the Government. ನಿನ್ನೆ ಪುನಃ ಮೈಸೂರಿನಲ್ಲಿ ಬಾಂಬ್ ಬ್ಲಾಸ್ಟ್ ಆಗಿದೆ. ಒಂದು ಬಾಂಬ್‌ನ್ನು ಪೋಲಿಸ್‌ನವರು ಮೈಸೂರಿನಲ್ಲಿ ಸೀಜ್ ಮಾಡಿದ್ದಾರೆ. ಹಾಗಾದರೆ ಈ ಬಾಂಬ್‌ಗಳು ಎಲ್ಲಿಂದ ಬರುತ್ತಿವೆ, ಪೋಲಿಸ್‌ನವರು ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದಾರೆ. ನೀವು ಒಬ್ಬರನ್ನೂ ಅರೆಸ್ಟ್ ಮಾಡಲಿಲ್ಲ ಎಂದರೆ ಸರ್ಕಾರದವರು ಏಕೆ ಇದ್ದಾರೆ. ಇದು ಯಾವ ತರಹದ ಪೋಲಿಸ್ ಇಲಾಖೆ, ಈ ಪೋಲಿಸ್ ಇಲಾಖೆಯವರು ಏನು ಮಾಡುತ್ತಿದ್ದಾರೆ. ಕೇವಲ ಒಬ್ಬ ಸಣ್ಣ ಸಬ್‌ಇನ್ಸ್‌ಪೆಕ್ಟರ್ ಅಥವಾ ಕಾನ್ಸ್‌ಟೇಬಲ್‌ರವರನ್ನು ಸಸ್ಪೆಂಡ್ ಮಾಡುತ್ತೀರಿ. ಆದರೆ ಇದಕ್ಕೆ ಸಂಬಂಧಪಟ್ಟವರನ್ನು ಹಿಡಿಯುವುದಕ್ಕೆ ಆಗುವುದಿಲ್ಲ . ಇದು ಒಂದು ಜಾಲ ಇದೆ, ಈ ಜಾಲವನ್ನು ನೀವು ಗುರುತಿಸಬೇಕಾದರೆ ಇವತ್ತು ಹಿರಿಯ ಅಧಿಕಾರಿಗಳು ಜವಾಬ್ದಾರರು ಆಗಬೇಕಾಗುತ್ತದೆ. ಹೊರಗಡೆ ಯಾವುದೋ ಒಂದು ಆಯಿತು, ನೀವು ಹೇಳಿದ್ದು ಒಪ್ಪಿಕೊಂಡೆವು. ದಿನಾ ಪತ್ರಿಕೆಯಲ್ಲಿ ಬರುತ್ತಿದೆ. ಮೈಸೂರಿನಲ್ಲಿ ಆಗಿದೆ, ಬೆಳಗಾಂನಲ್ಲಿ ಆಗಿದೆ, ಬಟ್ಕಳನಲ್ಲಿ ಆಗಿದೆ. ಹಾಗಾಗಿ ಇವತ್ತು ನಾನು ತಮ್ಮ ಮುಖಾಂತರ ಸರ್ಕಾರದ ಮೇಲೆ ಒತ್ತಾಯ ತರುತ್ತಿದ್ದೇನೆ. ನೀವು ಏನು ಕ್ರಮ ತೆಗೆದುಕೊಂಡಿರಿ? ಕೆಲವೊಂದು ನಿಮಗೆ ಕಾನ್‌ಫಿಡೆನ್ಸಿಯಲ್ ಮ್ಯಾಟರ್ ಇರುತ್ತದೆ. ಅದನ್ನು ಹೇಳಿ ಎಂದು ಹೇಳುವುದಿಲ್ಲ. ಆದರೆ ಎಷ್ಟು ಜನರನ್ನು ಅರೆಸ್ಟ್ ಮಾಡಿದಿರಿ? ಎಷ್ಟು ಜನ ಆಂಟಿ ಸೋಷಿಯಲ್ ಎಲಿಮೆಂಟ್ಸನ್ನು ಅರೆಸ್ಟ್ ಮಾಡಿದಿರಿ ' ಎಷ್ಟು ಜನ ಮಿಸ್ಕ್ರಿಯೆಂಟ್ಸ್‌ನ್ನು ಅರೆಸ್ಟ್ ಮಾಡಿದಿರಿ? ಈ ಬಾಂಬ್‌ಗಳು ಎಲ್ಲಿ ತಯಾರಾಗುತ್ತವೆ? ನನಗೆ ಗೊತ್ತಾಗಿದೆ, ಈ ಬಾಂಬ್‌ನ್ನು ಏನು ಮೈಸೂರಿನಲ್ಲಿ ಪೋಲೀಸ್‌ನವರು ಹಿಡಿದಿದ್ದಾರೆ, it is a very Powerful bomb ಎಂದು; ಮತ್ತು ಸಿಸ್ಟಮ್ಯಾಟಿಕ್ ಆಗಿ ಅದನ್ನು ತಯಾರು ಮಾಡುವ ಬಹಳ ತಜ್ಞರು ಇರುತ್ತಾರೆ. ಮೈಸೂರಿನಲ್ಲಿ ಏನು ಬಾಂಬ್ ಇವತ್ತು ಸಿಕ್ಕಿದೆ, ಅದನ್ನು ಮಾಡುವ ಜನರು ಬಹಳ ತಜ್ಞರು. ಹಾಗಾಗಿ ಯಾರು ಆ ಜನರು ? ಪೋಲೀಸರಿಗೆ ಏತಕ್ಕೆ ಹಿಡಿಯುವುದಕ್ಕೆ ಆಗುತ್ತಿಲ್ಲ? ಮೈಸೂರ್‌ನಲ್ಲಿ ಇದು ಒಂದನೇ ಸಲವಲ್ಲ. ಇದು ನಾಲ್ಕನೇ ಬಾರಿ ಮೈಸೂರಿನಲ್ಲಿ ಆಗುತ್ತಿದೆ. ಹಾಗಾಗಿ ಇಡೀ ಸರ್ಕಾರ ಇಡೀ ಪೋಲೀಸ್ ಇಲಾಖೆ ಇವತ್ತು ವಿಫಲವಾಗಿದೆ. ಮುಖ್ಯಮಂತ್ರಿಗಳ ಹಿಡಿತ ಇವತ್ತು ಪೋಲೀಸ್ ಇಲಾಖೆ ಮೇಲೆ

ಹೋಗಿದೆ. ಹಾಗಾಗಿ ಕೇವಲ ನಮಗೆ ಸಮಾಧಾನ ಮಾಡುವುದಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತಿದ್ದೇವೆ, ಸರಿಯಾಗಿ ಕ್ರಮ ತೆಗೆದುಕೊಳ್ಳುತ್ತೇವೆ, ನೀವು ಕಾಳಜಿ ಮಾಡಬೇಡಿ ಎಂತೆಲ್ಲ ಹೇಳಿದರೆ ಸಾಲದು. ಅದರ ಬಗ್ಗೆ ಸೂಕ್ತವಾದ ಕ್ರಮ ಸರ್ಕಾರದಿಂದ ಆಗಬೇಕಾಗಿದೆ. ಸರ್ಕಾರ ಸ್ಪಷ್ಟವಾಗಿ ಅದರ ಬಗ್ಗೆ ಹೇಳ ಬೇಕಾಗುತ್ತದೆ ಮತ್ತು ಭಟ್ಕಳ್‌ನಲ್ಲಿ ಏನು ಸಿಚುಯೇಷನ್ ಇದೆ, ಇವತ್ತು ಅದು ಪುನಃ ಮಾಮೂಲಿಗೆ ಬರುವುದಕ್ಕೆ ಏನು ಪ್ರಯತ್ನ ಸರ್ಕಾರದಿಂದ ಆಗಿದೆ? ನಮ್ಮ ಕಡೆಯಿಂದ ನಾವು ಪ್ರಯತ್ನವನ್ನು ಮಾಡುತ್ತಿದ್ದೇವೆ. ನಾವು ನಿನ್ನೆ ಭಟ್ಕಳ್‌ಗೆ ಹೋಗಬೇಕು ಎಂದು ಮಾಡಿದ್ದೆವು. ಪೊಲೀಸ್ ಅಧಿಕಾರಿಗಳು ಬೇಡ ಎಂದು ಹೇಳಿದರು. ಸ್ವಲ್ಪ ಶಾಂತಿಪ್ರಸ್ತಾವ ಆಗಲಿ, ಆ ನಂತರ ಹೋಗಿ ಎಂದು ಹೇಳಿದರು. ಹಾಗಾಗಿ ನಮಗೆ ಹೋಗುವುದಕ್ಕೆ ಆಗಲಿಲ್ಲ. ನಮ್ಮ ಯಶವಂತ ಹೆರವಟ್ಟ ಅವರನ್ನು ಕಳುಹಿಸುವುದಕ್ಕೆ ಪ್ರಯತ್ನ ಮಾಡಿದೆ. ಆಗ ಪೋಲೀಸ್ ಅಧಿಕಾರಿಗಳು ಕಾನೂನು ಬಗ್ಗೆ ಅಡ್ವೈಸ್ ಮಾಡಿದಾಗ ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಆದರೆ ಇವತ್ತು -ಸರ್ಕಾರ, ಪೋಲೀಸ್ ಇಲಾಖೆ ಅಲ್ಲಿ ಶಾಂತಿ ಸುವ್ಯವಸ್ಥೆ, ತರುವುದಕ್ಕೆ ಏನು ಪ್ರಯತ್ನ ಮಾಡಿದೆ, ಅದು ನನಗೆ ಗೊತ್ತಾಗಬೇಕಾಗಿದೆ. ಎಷ್ಟು ಜನರನ್ನು ಅರೆಸ್ಟ್ ಮಾಡಿದ್ದಾರೆ? ಎಷ್ಟು ಜನರ ಮೇಲೆ ನೀವು ಕ್ರಮ ತೆಗೆದುಕೊಂಡಿರಿ ಎನ್ನುವುದು ನಮಗೆ ಗೊತ್ತಾಗಬೇಕಾಗಿದೆ. ಕ್ರಮ ಎಂದರೆ ಕೇವಲ ಅರೆಸ್ಟ್ ಮಾಡಿ ಸಂಜೆ ಬಿಡುವುದಲ್ಲ. ಆ ಗುಂಡಾ ಆ್ಯಕ್ಟ್ ಕೆಳಗೆ ಅವರನ್ನು ಒಳ ಹಾಕಬೇಕು. ಇವರು ಹೊರಗಡೆ ಬರಬಾರದು. ಕೆಲವರು habitual ಇದ್ದಾರೆ. ಇವರು ಮಾಡುತ್ತಲೇ ಬರುತ್ತಿದ್ದಾರೆ. ಪೋಲೀಸರಿಗೆಲ್ಲಾ ಗೊತ್ತಿದೆ. ಅಂಥ ಜನರ ಮೇಲೆ ಬಹಳ ಸ್ಟರ್ನ್ ಆ್ಯಕ್ಷನ್ ತೆಗೆದುಕೊಳ್ಳ ಬೇಕಾಗುತ್ತದೆ. ಸರ್ಕಾರ ಏನು ಆ್ಯಕ್ಷನ್ ತೆಗೆದುಕೊಂಡಿದೆ, ಅದು ನಮಗೆ ಗೊತ್ತಾಗಬೇಕಾಗಿದೆ. ಯಾವ ಜನ ಇಂಜ್ಯೂರ್ಡ್ ಆಗಿದ್ದಾರೆ, ಅವರಿಗೇನು ಮಾಡಿದ್ದಾರೆ, ಅವರಿಗೆ ಒಂದೂವರೆ ಸಾವಿರ ರೂಪಾಯಿ ಕೊಟ್ಟಿದ್ದಾರೆ. ಏನು ಅದು ಪರಿಹಾರ? ಏತಕ್ಕೆ ಒಂದೂವರೆ ಸಾವಿರ ರೂಪಾಯಿಗಳನ್ನು ಕೊಡುತ್ತೀರಿ? ಇಬ್ಬರು ಸೀರಿಯಸ್ ಆಗಿ ಮಣಿಪಾಲ್ ಆಸ್ಪತ್ರೆಯಲ್ಲಿದ್ದಾರೆ. ಅವರಿಗೂ ಒಂದೂವರೆ ಸಾವಿರ ರೂಪಾಯಿ, ಭಟ್ಕಳ್ ಆಸ್ಪತ್ರೆಯಲ್ಲಿರುವವರಿಗೂ ಒಂದೂವರೆ ಸಾವಿರ ರೂಪಾಯಿ ಅಂದರೆ ಯಾವ ರೀತಿಯ ನ್ಯಾಯ ಇದು. ಹಾಗಾಗಿ ಸಾಕಷ್ಟು ಕಾಂಪೆನ್‌ಸೇಷನ್ ಅವರಿಗೆ ಹೋಗಬೇಕಾಗಿದೆ. ಎಲ್ಲೆಲ್ಲಿ ಪ್ರಾಪರ್ಟಿ ಡ್ಯಾಮೇಜ್ ಆಗಿದೆ, ಲೂಟಿ ಆಗಿದೆ, ಏನು ಮ್ಯಾಜಿಸ್ಟ್ರೇಟ್‌ನಿಂದ ಪಂಚನಾಮೆ ಆಗಿ ಅವರಿಗೂ ಸಹ ಅಡ್ವೆಕ್ವೇಟ್ ಕಾಂಪನ್‌ಸೇಷನ್ ಸಿಗಬೇಕಾಗಿದೆ. ನಾನು ಸದನದ ಮುಖಾಂತರ ನಿನ್ನೆಯೂ ಅಪೀಲು ಮಾಡಿದ್ದೇನೆ, ಪುನಃ ಅಪೀಲು ಮಾಡುತ್ತಿದ್ದೇನೆ. ಶಾಂತಿ , ಸೌಹಾರ್ದತೆಯನ್ನು ಜನರು ಕಾಯ್ದುಕೊಳ್ಳಬೇಕು. ಶಾಂತಿ ಪ್ರಸ್ತಾಪ ಮಾಡುವುದಕ್ಕೆ ಅಡ್ಮಿನಿಸ್ಟ್ರೇಷನ್‌ಗೆ ಸಂಪೂರ್ಣವಾಗಿ ಸಹಕರಿಸಬೇಕು. ಮತ್ತು ಮೈಸೂರಿನಲ್ಲಿ ಏನು ಬಾಂಬ್ ಬ್ಲಾಸ್ಟ್ ಆಯಿತು, ಆಗ ಅಲ್ಲಿಯೇ ಇದ್ದ ಒಬ್ಬ ಮಲ್ಲಪ್ಪ ಎನ್ನುವ ಕೂಲಿ ರಿಪೋರ್ಟ್ ಮಾಡಿದ, ಅಧಿಕಾರಿಗಳು ಅವನನ್ನು ಮೆಚ್ಚಬೇಕು. ಅವನ ಧೈರ್ಯ ಮೆಚ್ಚಬೇಕು. ಹಾಗಾಗಿ ಸರ್ಕಾರ ಅವನಿಗೆ ಒಂದು ಅವಾರ್ಡ್ ಕೊಡಬೇಕು. ಒಂದು ಕ್ಯಾಷ್ ಅವಾರ್ಡ್ ಕೊಡಬೇಕು. ಪ್ರಶಸ್ತಿ ಕೂಡ ಸರ್ಕಾರದಿಂದ ಸಿಗಬೇಕಾಗಿದೆ. ಮತ್ತು ಜನರಲ್ಲಿಯೂ ಸಹ ಸರಿಯಾದ ತಿಳುವಳಿಕೆಯನ್ನು ನಾವು ಕೊಡಬೇಕಾಗುತ್ತದೆ. ಇಂಥ ಘಟನೆಯಾದಾಗ ಜನರು ಯಾವ ಪ್ರಕಾರ ಸರ್ಕಾರಕ್ಕೆ ಸಹಾಯ ಮಾಡುವುದಕ್ಕೆ ಸಾಧ್ಯವಾಗುತ್ತದೆ, ಅದರ ಬಗ್ಗೆಯೂ ತಿಳಿವಳಿಕೆಯನ್ನು ಕೊಡಬೇಕಾಗುತ್ತದೆ ಮತ್ತು ಭಟ್ಕಳ್‌ದಲ್ಲಿ ನಿನ್ನೆ ನಡೆದ ಘಟನೆ ಬಗ್ಗೆ ಮೈಸೂರ್‌ನಲ್ಲಿ ನಡೆದ ಘಟನೆ ಬಗ್ಗೆ ಮತ್ತು ಬೆಳಗಾಂನಲ್ಲಿ ನಡೆದ ಘಟನೆ ಬಗ್ಗೆ ಸರ್ಕಾರ ತನ್ನ ಸ್ಪಷ್ಟೀಕರಣ ನೀಡಬೇಕು. ಏಕೆಂದರೆ ನೀವು ಸುಮ್ಮನೆ ನಮಗೆ ಹೀಗೆ ಬಂದೋಬಸ್ತು ಮಾಡಿದ್ದೇವೆ, ಎಂದು ಹೇಳಿದರೆ ನಾವು ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ನೀವು ನೇರವಾಗಿ ಹೇಳಬೇಕು. ಎಷ್ಟು ಜನರನ್ನು ಎಲ್ಲೆಲ್ಲಿ ಅರೆಸ್ಟ್ ಮಾಡಿದಿರಿ? ಮೈಸೂರ್‌ನಲ್ಲಿ ನಾಲ್ಕನೇ ಬಾರಿ ಬಾಂಬ್ ಬ್ಲಾಸ್ಟ್

ಮಾಡಿದಾಗ ಒಬ್ಬರನ್ನೂ ಅರೆಸ್ಟ್ ಮಾಡಿಲ್ಲ. ಇವತ್ತು ನಿಮ್ಮ ಸರ್ಕಾರಕ್ಕೆ ನಾವು ಛೀಮಾರಿ ಹಾಕಬೇಕು. ಏತಕ್ಕೆ ಅಧಿಕಾರದಲ್ಲಿ ನೀವು ಇರಬೇಕು? ಏನು ರೈಟ್ಸ್ ಇದೆ ನಿಮಗೆ? ಪ್ರತಿ ಸಾರಿ ಬಂದು ನೀವು ಕಾಳಜಿ ಮಾಡಬೇಡಿ, ನಾವು ಇದನ್ನು ಮಾಡಿದ್ದೇವೆ, ಅದನ್ನು ಮಾಡಿದ್ದೇವೆ ಎಂದು ಹೇಳಿದರೆ ಎಷ್ಟು ದಿವಸ ಇದನ್ನು ನಾವು ಕೇಳಬೇಕು. ಹಾಗಾಗಿ ಮೈಸೂರ್ ಆಗಲಿ, ರಾಜ್ಯದ ಬೇರೆ ಭಾಗದಲ್ಲಿ ಆಗಲಿ ಈ ಒಂದು ಭಯದ ವಾತಾವರಣ ಏನು ನಿರ್ಮಾಣವಾಗಿದೆ, ಆ ಭಯದ ವಾತಾವರಣ ಹೋಗಬೇಕು. ನಿಮಗೆ ಸಂಪೂರ್ಣವಾಗಿ ಸಹಕಾರ ಮಾಡುವುದಕ್ಕೆ ನಾವು ತಯಾರಾಗಿದ್ದೇವೆ. ಅದು ನಮ್ಮ ಕರ್ತವ್ಯ . ಏಕೆಂದರೆ ಲಾ ಅಂಡ್ ಆರ್ಡರ್‌ನಲ್ಲಿ ಅದು ಇಡೀ ರಾಜ್ಯದಲ್ಲಿ ಮೈನ್‌ಟೈನ್ ಆಗಬೇಕಾಗುತ್ತದೆ. ಯಾರೇ ಆಂಟಿ ಸೋಷಿಯಲ್ ಎಲಿಮೆಂಟ್ಸ್ ಇರಲಿ ಯಾರು ಎಷ್ಟೇ ಪವರ್‌ಫುಲ್ ಇರಲಿ, ಅದರಲ್ಲಿ ಯಾರೇ ಇನ್‌ವಾಲ್ವ್ ಆಗಲಿ, ಅವರ ಮೇಲೆ ಒಂದು ಕಟ್ಟುನಿಟ್ಟಿನ ಕ್ರಮ ಸರ್ಕಾರ ತೆಗೆದುಕೊಳ್ಳ ಬೇಕು ಎಂದು ತಮ್ಮ ಮುಖಾಂತರ ಒತ್ತಾಯ ಮಾಡಿ, ಸರ್ಕಾರ ಈ ಎಲ್ಲಾ ಹಂತದಲ್ಲಿ ಕ್ರಮ ತೆಗೆದುಕೊಳ್ಳಲು ಸಂಪೂರ್ಣವಾಗಿ ವಿಫಲವಾಗಿದೆ ಎಂದು ಪುನಃ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಕೆ. ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಅಧ್ಯಕ್ಷರೇ, ಈ ಭಟ್ಕಳದಲ್ಲಿ ಆಂಜನೇಯ ಸ್ವಾಮಿ ಜಾತ್ರೆ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ.....

ಅಧ್ಯಕ್ಷರು : ಭಟ್ಕಳದ ವಿಷಯ ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಎಲ್ಲರೂ ಮೈಸೂರಿಗೆ ಬರುತ್ತಿದ್ದಾರೆ. ನಾನು ಮೊದಲು ತಮ್ಮ ಹತ್ತಿರಕ್ಕೆ ಬಂದಿದ್ದೆ. ಭಟ್ಕಳ್‌ದು ಆದರೂ ನಿಲ್ಲಿಸುವುದು ಆಗಿದ್ದರೆ ನನ್ನದೇನೂ ಅಭ್ಯಂತರವಿರಲಿಲ್ಲ. ಭಟ್ಕಳದಿಂದ ಮತ್ತೆ ಮೈಸೂರಿಗೆ ಬಂದರು. ಮೈಸೂರಿನಿಂದ ಮೇಟಗಳ್ಳಿಗೆ ಬರುತ್ತಿದ್ದಾರೆ.

ಶ್ರೀ ಕೆ. ಎಸ್. ಈಶ್ವರಪ್ಪ : ಈ ಭಟ್ಕಳದಲ್ಲಿ 1ನೇ ತಾರೀಖು ಆಂಜನೇಯ ಸ್ವಾಮಿ ಜಾತ್ರೆ ನಡೆಯುತ್ತಿರತಕ್ಕಂಥ ಸಂದರ್ಭದಲ್ಲಿ ಆದಂಥ ಗಲಾಟೆ ಇದು. ಇಡೀ ಸಮಾಜ ಅಲ್ಲಿ ಸೇರಿತ್ತು. ಎಂಟು-ಹತ್ತು ಸಾವಿರ ಜನ ತುಂಬಾ ವೈಭವದಿಂದ, ತುಂಬ ಶಾಂತಿಯಿಂದ, ತುಂಬ ಭಕ್ತಿಪೂರ್ವಕವಾಗಿ ನಡೆಯುತ್ತಿದ್ದಂಥ ಒಂದು ಕಾರ್ಯಕ್ರಮ. ಇದ್ದಕ್ಕಿದ ಹಾಗೆ ಎರಡು ಮಿಸೈಲ್‌ಗಳು ಒಂದು ಮನೆಯಿಂದ ಹಾರಿ ಬಂತು. ಆ ಮಿಸೈಲ್‌ಗಳು ಹಾರಿ ಬಂದು ಆ ಮಿಸೈಲ್ ಕೂಡ ಬರ್ಸ್ಟ್ ಆಯಿತು, ಸಿಡಿಯಿತು. ಆ ಮಿಸೈಲ್ ಎಲ್ಲಿಂದ ಹಾರಿ ಬಂತು ಎನ್ನುವುದನ್ನು ಕೂಡ ಪೋಲೀಸ್‌ನವರು ಈಗಾಗಲೇ ಗುರ್ತಿಸಿದ್ದಾರೆ. ಡಾ॥ ಬರ್ಮಾ ಎಂಬುವರ ಮನೆ ಕಡೆಯಿಂದ ಈ ಎರಡೂ ಮಿಸೈಲ್‌ಗಳು ಹಾರಿ ಬಂದಿದೆ ಎಂದು ಪೋಲೀಸ್‌ನವರು ತಿಳಿಸಿದ್ದಾರೆ. ಇದಾದ ನಂತರ ಕೈ ಬಾಂಬ್‌ಗಳನ್ನು ಜಿಪಿ ನಾಯಕ್ ಎನ್ನುವ ನಮ್ಮ ಬಿಜೆಪಿ ನಾಯಕರ ಮನೆ ಮೇಲೆ ಹಾಕಿದ್ದಾರೆ. ಆ ಮನೆ ಜಖಂ ಆಗಿದೆ. ಅಂತಹ ಸಂದರ್ಭದಲ್ಲಿ ನಮ್ಮ ಜಿಪಿ ನಾಯಕ್ ಅವರು, ಅವರ ಶ್ರೀಮತಿ ಅವರು ಹಾಗೂ ಅವರ ಭಾವನವರು ಓಡಿ ಹೋಗುವ ಸಂದರ್ಭದಲ್ಲಿ ಅವರನ್ನು ಹಿಡಿದುಕೊಂಡು ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಇದಾದ ನಂತರ ಗಾಯ ಆದವರನ್ನು ಅಲ್ಲೇ ಆಸ್ಪತ್ರೆಗೆ ಸೇರಿಸಿದ್ದಾರೆ. ಮಣಿಪಾಲ್ ಆಸ್ಪತ್ರೆ ಹಾಗೂ ಬೇರೆ ಬೇರೆ ಆಸ್ಪತ್ರೆಗೆ ಸೇರಿಸಿದ್ದಾರೆ. ಮೂರನೇ ದಿವಸ ಹತ್ತು ಜನ ವ್ಯಕ್ತಿಗಳಿಗೆ ಚಾಕುಗಳಿಂದ ಇರಿತ ಆಗಿದೆ. ಇಲ್ಲಿ ಗಮನಿಸಬೇಕಾದ ಅಂಶ ಎಂದರೆ, ಎಲ್ಲ ಹತ್ತು ಜನರೂ ಕೂಡ ಹಿಂದೂಗಳು. ನಾನು ಏಕೆ ಈ ಅಂಶಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತಿದ್ದೇನೆಂದರೆ, ಅದಾದ ನಂತರ ಆರು ಮನೆಗಳಿಗೆ ಬೆಂಕಿ ಇಟ್ಟಿದ್ದಾರೆ. ಎಲ್ಲಾ

ಬಾಂಬ್ ಎಸೆಯಲಾದ ಮನೆಗಳನ್ನೂ ಎಲ್ಲಾದರೂ ನೋಡಿದರೆ ಧಾಳಿ ಯಾರು ಮಾಡಿದ್ದಾರೆ ಎನ್ನುವುದು ಸ್ಪಷ್ಟವಾಗಿ ಕಾಣುತ್ತದೆ. ಇದೆಲ್ಲಾ ಸರ್ಕಾರದ ಗಮನಕ್ಕೆ ಬಂದಿದೆ, ಇದರಲ್ಲಿ ಅನುಮಾನ ಏನೂ ಇಲ್ಲ. ಆದರೆ ಸರ್ಕಾರದವರು ಇವತ್ತಿನ ತನಕ ಕೂಡ ತಮ್ಮ ಕರ್ತವ್ಯದಲ್ಲಿ ಏನು ಮಾಡಬೇಕಿತ್ತು, ಅದರಲ್ಲಿ ಸಂಪೂರ್ಣ ವಿಫಲವಾಗಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಣ್ಣ ಪುಟ್ಟ ಕಾರ್ಯಕ್ರಮಗಳನ್ನು ಏನೋ ಮಾಡಿದ್ದೇವೆಂದು ಹೇಳಿಕೊಂಡು ಮುಂದೆ ಹೋಗುತ್ತಿದ್ದಾರೆ. ಇಡೀ ಪೋಲೀಸ್ ಇಲಾಖೆಯವರು ಏತಕ್ಕೆ ಹಿಂಜರಿಯುತ್ತಿದ್ದಾರೆಂದು ನನಗಂತೂ ಅರ್ಥ ಆಗುತ್ತಿಲ್ಲ. ನಿರ್ದಾಕ್ಷಿಣ್ಯವಾದ ಕ್ರಮವನ್ನು ಕೈಗೊಳ್ಳುವುದಕ್ಕೆ ಅವರು ಹಿಂಜರಿಯುತ್ತಿದ್ದಾರೆ. ಇದರಿಂದ ಯಾರ ಕೈವಾಡ ಇದೆಯೋ ಗೊತ್ತಾಗುತ್ತಿಲ್ಲ. ಅಲ್ಲಿ ಪರಿಸ್ಥಿತಿ ನಿನ್ನೆ ರಾತ್ರಿ ತನಕ ಕೂಡ ಇನ್ನೂ ಪ್ರಕ್ಷುಬ್ಧವಾಗಿದೆ. ಇನ್ನೂ ತುಂಬಾ ಗಲಾಟೆಗಳು ನಡೆಯುತ್ತಿದೆ. ಕರ್ಫ್ಯೂ ಜಾರಿಯಲ್ಲಿ ಇದ್ದರೂ ಕೂಡ ಆಕ್ರಮಣ ನಡೆಯುತ್ತಿದೆ. ಕರ್ಫ್ಯೂ ಒಂದು ಕಡೆ ಹಾಕಿದ್ದಾರೆ, ಆದರೂ ಮೇಲೆ ಮೇಲೆ ಆಕ್ರಮಣ ನಡೆಯುತ್ತಿದೆ. ಅಪರಾಧಿಗಳ ಶೋಧ ಇವತ್ತಿನತನಕ ನಡೆದಿಲ್ಲ , ಮಾರಕಾಸ್ತ್ರಗಳ ಶೋಧ ನಡೆದಿಲ್ಲ. ಇದರ ಹಿಂದೆ ಇರುವಂತಹ ಶಕ್ತಿಗಳು ಯಾವುದು ಎಂದು ಗುರ್ತಿಸಿಲ್ಲ. ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ, ಸ್ಕೂಟರ್‌ನಲ್ಲಿ ಹೋಗುತ್ತಿರುವಂತಹ ವ್ಯಕ್ತಿಗಳ ಹತ್ತಿರ ಮಾರಕಾಸ್ತ್ರಗಳು ಇದ್ದುದನ್ನು ಹಿಡಿದಿದ್ದಾರೆ. ಸ್ಕೂಟರ್ ಸಿಕ್ಕಿದೆ, ಆ ಮಾರಕಾಸ್ತ್ರ ಸಿಕ್ಕಿದೆ, ಆದರೆ ಆ ವ್ಯಕ್ತಿ ತಪ್ಪಿಸಿಕೊಂಡು ಹೋಗಿದ್ದಾನೆ. ಇದಕ್ಕಿಂತ ನಾಚಿಕೆಗೇಡು ಬೇರೆ ವಿಚಾರ ಇದೆಯೇ ಹೇಳಿ. ಸ್ಕೂಟರ್ ಸಿಕ್ಕಿದೆ, ಅದರೊಳಗೆ ಇರತಕ್ಕಂಥ ಸಾಮಗ್ರಿ ಸಿಕ್ಕಿದೆ. ಆದರೆ ಸರ್ಕಾರಕ್ಕೆ ಆ ವ್ಯಕ್ತಿಯನ್ನು ಹಿಡಿಯುವುದಕ್ಕೆ ಆಗುವುದಿಲ್ಲ, ಎಂದರೆ ಇವರು ಯಾರ ಪರ ಇದ್ದಾರೆ, ತಾರತಮ್ಯ ಮಾಡುತ್ತಿದ್ದಾರೆ ಎಂಬುದು ಸ್ಪಷ್ಟವಾಗಿ ಕಾಣುತ್ತಿದೆ. ಗುಪ್ತಚಾರ ಇಲಾಖೆ ಇದೆಯೋ ಇಲ್ಲವೋ ಎನ್ನುವ ಅನುಮಾನ ಆಗುತ್ತಿದೆ. ಹಾಗಾದರೆ ಇದು ಗೊತ್ತಿರಲಿಲ್ಲವೇ? ನಾನು ಆಶ್ಚರ್ಯ ಪಡುವುದು ಎಂದರೆ, ನಮ್ಮ ವಿರೋಧ ಪಕ್ಷದ ನಾಯಕರಿಗೆ ಅಲ್ಲಿ ಹೋಗುವುದಕ್ಕೆ ಅವಕಾಶ ಸಿಕ್ಕಿಲ್ಲ. ವಯಸ್ಕರ ಶಿಕ್ಷಣ ರಾಜ್ಯ ಮಂತ್ರಿಗಳಾದ ಶ್ರೀಮಾನ್ ಪ್ರಭಾಕರ್ ರಾಣೆ ಅವರಿಗೆ ಅಲ್ಲಿ ಹೋಗುವುದಕ್ಕೆ ಅವಕಾಶ ಸಿಕ್ಕಿಲ್ಲ. ನಮ್ಮ ಡಾ॥ ವಿ.ಎಸ್. ಆಚಾರ್ ಅವರು ಅಲ್ಲಿ ಹೋಗುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದರೆ ಅವರಿಗೆ ಅಲ್ಲಿ ಹೋಗುವುದಕ್ಕೆ ಅವಕಾಶ ಸಿಕ್ಕಿಲ್ಲ. ನಾನು ಅದಕ್ಕೋಸ್ಕರ ತಮ್ಮ ಮುಖಾಂತರ ಸರ್ಕಾರಕ್ಕೆ ಹೇಳುವುದು ಇಷ್ಟೇನೇ. ತಾವು ಏತಕ್ಕೆ ಈ ಅಪರಾಧಿಗಳನ್ನು ಹಿಡಿಯುವುದಕ್ಕೆ ಯೋಚನೆ ಮಾಡುತ್ತಿದ್ದೀರಿ? ಒಂದನೇ ತಾರೀಖು ಆದ ಗಲಾಟೆ. ಅಲ್ಲಿ ಪ್ರತಿ ನಿತ್ಯ ಲೂಟಿ ಆಗುತ್ತಿದೆ, ಪ್ರತಿನಿತ್ಯ ಅಲ್ಲಿ ಚಾಕು ಹಾಕುತ್ತಿದ್ದಾರೆ, ಪ್ರತಿನಿತ್ಯ ಕೂಡ ಅಲ್ಲಿ ಮನೆಗಳಿಗೆ ಬೆಂಕಿ ಹಾಕುತ್ತಿದ್ದಾರೆ; ಕೈಬಾಂಬ್‌ಗಳನ್ನು ಎಸೆಯುತ್ತಿದ್ದಾರೆ. ಆ ಭಾಗದಲ್ಲಿ ಹಿಂದೂಗಳು ತುಂಬಾ ಕಡಿಮೆ ಸಂಖ್ಯೆಯಲ್ಲಿರುವುದು. ಸರ್ಕಾರ ಈ ದಿಕ್ಕಿನಲ್ಲಿ ರಾಜಕೀಯವಾಗಿ ಏಕೆ ಯೋಚನೆ ಮಾಡಿದೆಯೋ ನನಗಂತೂ ಅರ್ಥ ಆಗುತ್ತಿಲ್ಲ. ಬೇರೆ ಸಂದರ್ಭದಲ್ಲಿ ಇಡೀ ಸದನ ಪುಡಿಯಾಗಬೇಕು ಎನ್ನುವ ತರಹದಲ್ಲಿ ಕೂಗುತ್ತಾರೆ. ಹಾಗೂ ಅವರು ಪರಿಹಾರ ಕೇಳುವುದಕ್ಕಿಂತ ಮುಂಚೆ ಇವರೇ ಘೋಷಣೆ ಮಾಡಿಬಿಡುತ್ತಾರೆ. ಇವತ್ತು ತುಂಬಾ ತೊಂದರೆಯಲ್ಲಿರುವಂತಹ ಆ ವ್ಯಕ್ತಿಗಳಿಗೆ, ಬಾಂಬ್ ಬಿದ್ದಂತಹ ವ್ಯಕ್ತಿಗಳಿಗೆ, ಚಾಕು ಹಾಕಿರುವಂತಹ ವ್ಯಕ್ತಿಗಳಿಗೆ ಪರಿಹಾರ ಕೊಡುತ್ತಿರುವುದು ನೋಡಿದರೆ ಇವರು ಭಿಕ್ಷೆ ಕೊಟ್ಟ ಹಾಗೆ ಕೊಟ್ಟಿದ್ದಾರೆ, ಘೋಷಣೆ ಮಾಡಿದ್ದಾರೆ. ನಾನು ಅದಕ್ಕೋಸ್ಕರ ಸರ್ಕಾರಕ್ಕೆ ಹೇಳುವುದು ಇಷ್ಟೆ, ಜಾತ್ಯಾತೀತ ನೀತಿ ಅನುಸರಿಸಬೇಕು ಎಂದು ಕೇವಲ ರಾಜಕೀಯವಾಗಿ ಮಾಡಬೇಡಿ. ಈ ದೇಶದಲ್ಲಿ ಎಲ್ಲರೂ ಕೂಡ ಸಮಾನವಾಗಿ ಇರಿ ಎಂದು ಮುಂಚೆಯಿಂದಲೂ ನಾವು ಹೇಳುತ್ತಿದ್ದೇವೆ. ಅಲ್ಪ ಸಂಖ್ಯಾತರಾಗಿರುವಂತಹ ಹಿಂದುಗಳ ಬಗ್ಗೆ ಆ ಭಾಗದಲ್ಲಿ ಇಷ್ಟೊಂದು ನಿರ್ಲಕ್ಷ್ಯ. ದಯವಿಟ್ಟು ಈ ಕೃತ್ಯ ಸರ್ಕಾರ ಮಾಡಕೂಡದು. ಏನು ಕ್ರಮ ಕೈಗೊಂಡಿದ್ದೀರಿ? ಯಾರು ಈ ಕೃತ್ಯದಲ್ಲಿ ಹಿಂದೆ ಇದಾರೆ, ಅವರನ್ನು ಹಿಡಿಯುವ ಬಗ್ಗೆ

ಸತತವಾಗಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದೀರಾ? ಎಷ್ಟು ಜನರನ್ನು ಇದರಲ್ಲಿ ಅರೆಸ್ಟ್ ಮಾಡಿದ್ದೀರಿ? ಆ ಕೈ ಬಾಂಬ್‌ಗಳು ಎಲ್ಲೆಲ್ಲಿ ತಯಾರಾಗುತ್ತಿತ್ತು? ಆ ಮಿಸೈಲ್‌ಗಳು ಎಲ್ಲಿಂದ ಬಂತು? ಎರಡು ಮಿಸೈಲ್ ಮಾತ್ರ ಆ ಡಾ॥ ಬರ್ಮಾರವರ ಮನೆಯಿಂದ ಬಂದಿದೆ ಎಂದು ಪೋಲೀಸ್‌ನವರು ಹೇಳುತ್ತಿದ್ದಾರೆ. ಇನ್ನು ಎಷ್ಟು ಮಿಸೈಲ್‌ಗಳು ಯಾವ್ಯಾವ ಮನೆಯಿಂದ ಹೋಗಿದೆ? ಈ ರೀತಿ ಪ್ರಾಮಾಣಿಕ ಪ್ರಯತ್ನ ಮಾಡಿ, ತನಿಖೆ ಮಾಡಿ , ಅದರ ಪ್ರಾಮಾಣಿಕ ವರದಿಯನ್ನು ಈ ಒಂದು ಸದನದ ಮೂಲಕ ಇಡೀ ರಾಜ್ಯಕ್ಕೆ ಕೊಟ್ಟು ಸತ್ಯಾಸತ್ಯತೆ ಇದ್ದರೆ ಮಾತ್ರ ಈ ಸರ್ಕಾರದ ಬಗ್ಗೆ ಇಡೀ ರಾಜ್ಯದ ಜನ ಗೌರವದಿಂದ ನೋಡಬೇಕಾಗುತ್ತದೆ. ಅದಕ್ಕೋಸ್ಕರ ನಾನು ಈ ಸರ್ಕಾರವನ್ನು ನಿಮ್ಮ ಮೂಲಕ ಕೈ ಮುಗಿದು ಕೇಳಿಕೊಳ್ಳುತ್ತಿದ್ದೇನೆ. ಈ ಘಟನೆಯ ಹಿಂದಿರತಕ್ಕ ವ್ಯಕ್ತಿಗಳನ್ನು ಸರ್ಕಾರ ಹಿಡಿಯುವುದರಲ್ಲಿ ಖಂಡಿತ ಸಫಲವಾಗುತ್ತದೆಯೆ ? ಹಿಡಿಯುವ ಅಪೇಕ್ಷೆ ಇದೆಯೇ? ಮತ್ತು ಘಟನೆಯಲ್ಲಿ ನೊಂದವರಿಗೆ ಪರಿಹಾರ ಕೊಡುವಲ್ಲಿ ತಾರತಮ್ಯವಿಲ್ಲದೆ ಪ್ರಾಮಾಣಿಕವಾಗಿ ಕೊಡಬೇಕು. ನೊಂದವರ ಲೆಕ್ಕದಲ್ಲಿ ಮುಸ್ಲೀಮರು, ಹಿಂದೂಗಳು ಎಂದು ಇರುವುದಕ್ಕೆ ಸಾಧ್ಯವಿಲ್ಲ. ಅವರನ್ನು ಗುರ್ತಿಸಿ, ಅವರ ಬಳಿಗೆ ಹೊಗಿ, ಅವರ ಗೋಳನ್ನು ಕೇಳಿ ಅವರಿಗೆ ಹಣ ಕೊಡುವ ಕೆಲಸವನ್ನು ಇಷ್ಟರೊಳಗಾಗಿ ಮಾಡಬೇಕಾಗಿತ್ತು. ನೊಂದವರಿಗೆ ಹಣ ಕೊಡುವುದು, ಬಿಡುವುದು ಒಂದು ಕೆಲಸವಾದರೆ, ನಾನು ತುಂಬಾ ಒತ್ತಾಯಪೂರ್ವಕವಾಗಿ ಸರ್ಕಾರಕ್ಕೆ ಕೇಳಿಕೊಳ್ಳುವುದಿಷ್ಟೆ; ಈ ಘಟನೆ ಹಿಂದೆ ದೊಡ್ಡ ಷಡ್ಯಂತ್ರ ಏನಿದೆ, ಇದರಲ್ಲಿ ರಾಷ್ಟ್ರದ್ರೋಹಿಗಳು ಯಾರು ಸೇರಿಕೊಂಡಿದ್ದಾರೋ, ಅವರನ್ನು ಗುರ್ತು ಹಿಡಿದು ಸರ್ಕಾರ ತನ್ನ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತದೆಯೇ? ಎಂದು; ಇದಕ್ಕೆ ಸರ್ಕಾರದಿಂದ ಉತ್ತರ ಬಂದ ನಂತರ ಇದರ ವಿಚಾರವಾಗಿ ಇನ್ನೂ ಕೆಲವು ಪ್ರಶ್ನೆಗಳನ್ನು ಕೇಳುತ್ತೇನೆ.

* ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ನಾವು ಈ ಸದನದಲ್ಲಿ ಕುಳಿತುಕೊಂಡು ಒಂದೇ ಸಮನೆ ಇದರ ಬಗ್ಗೆ ಸರ್ಕಾರಕ್ಕೆ ಹೇಳುತ್ತಿದ್ದೇವೆ. ಇದು ಬಹಳ ಗಂಭೀರವಾದಂಥ ವಿಷಯವಾಗಿದ್ದು, ಈ ಬಗ್ಗೆ ಸರ್ಕಾರ ಮೊಸಳೆ ಕಣ್ಣೀರಿನ ತರಹ ಒಂದು ಹೇಳಿಕೆ ಕೊಟ್ಟು ನಮ್ಮ ಸರ್ಕಾರ ಎಲ್ಲಾ ಬಂದೋಬಸ್ತ್ ಮಾಡಿದೆ. ಹೊರಗಡೆಯಿಂದ ಯಾವುದೇ ಬಾಂಬ್ ಕರ್ನಾಟಕದೊಳಗೆ ಬರದಂಥ ರೀತಿಯಲ್ಲಿ ಎಲ್ಲಾ ಕಡೆ ಗಡಿ ಮುಚ್ಚಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿ ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡಿದ್ದಾರೆ. ಒಂದು ಕಡೆ ಈ ರೀತಿ ಹೇಳುತ್ತಲೇ ಇದ್ದಾರೆ. ಆದರೆ, ಬಾಂಬ್ ಹಾಕುವ ಪರಿಸ್ಥಿತಿ ಎಲ್ಲಾ ಕಡೆ ಇದೆ. ಮೈಸೂರು ನಗರವೊಂದರಲ್ಲೆ ಪ್ರತಿದಿನ ಸುಮಾರು ಬಾಂಬ್‌ಗಳನ್ನು ಸ್ಫೋಟಿಸಲಾಗುತ್ತಿದೆ. ನಿನ್ನೆ ದಿವಸ ಕೇತಮಾರನಹಳ್ಳಿಯಲ್ಲಿ ಒಂದು ಬಾಂಬ್ ಇಟ್ಟಿದ್ದು, ಇದರ ಬಗ್ಗೆ ಒಬ್ಬ ವ್ಯಕ್ತಿ ಬಂದು ಅಲ್ಲಿ ಬಾಂಬ್ ಇಡಲಾಗಿದೆಯೆಂದು ಹೇಳದೇ ಇದ್ದಿದ್ದರೆ, ಅದೊಂದು ತೀವ್ರ ಅಪಾಯಕಾರಿಯಾದ ಮತ್ತು ಶಕ್ತಿಯುತವಾದ ಬಾಂಬ್ ಆಗಿದ್ದು, ಅದು ಸಿಡಿದಿದ್ದರೆ ನೂರಾರು ಜನರಿಗೆ ಅಪಾಯವಾಗುತ್ತಿತ್ತು. ಈ ಬಾಂಬ್ ಎಲ್ಲಿಂದ ಬರುತ್ತಿದೆ? ಇದನ್ನು ಸ್ಫೋಟಿಸತಕ್ಕಂಥವರ್ಯಾರು ಎಂಬುದನ್ನು ಪತ್ತೆ ಹಚ್ಚಲೆಂದೇ ಸರ್ಕಾರದಲ್ಲಿ ಒಂದು ಗುಪ್ತದಳವಿದೆ. ಇವ್ಹೊತ್ತು ಆ ಗುಪ್ತದಳ ಇದೆಯೋ? ಇಲ್ಲವೋ? ಎನ್ನುವ ಅನುಮಾನ ನಮಗೆ ಬರುತ್ತಿದೆ. ಬೆಳಗಾವಿಯಲ್ಲಿ ನೋಡುವುದಾದರೆ ಆ ಬಾಂಬ್ ಮಿಲಿಟರಿಗೆ ಸಂಬಂಧಪಟ್ಟದ್ದು ಎಂದು ಹೇಳುತ್ತಾರೆ. ಆದುದರಿಂದ, ಅದು ಮಿಲಿಟರಿಗೆ ಸಂಬಂಧಪಟ್ಟಿದ್ದೇ? ಅಲ್ಲವೇ? ಎನ್ನುವ ಬಗ್ಗೆ ಸರಿಯಾದಂಥ ಮಾಹಿತಿ ಸಹ ಸರ್ಕಾರಕ್ಕೆ ಸಿಗುತ್ತಿಲ್ಲ. ಇನ್ನು ಭಟ್ಕಳದ ಪರಿಸ್ಥಿತಿ ನೋಡಿದರೆ ಅಲ್ಲಿ ಸುತ್ತಮುತ್ತ ಧಾರ್ಮಿಕ ಮೆರವಣಿಗೆಗಳು, ಸಭೆ-ಸಮಾರಂಭಗಳು ನಡೆಯುತ್ತಿರತಕ್ಕಂಥ ಸ್ಥಳಗಳಲ್ಲಿ ಬಾಂಬ್ ಹಾಕುತ್ತಿದ್ದಾರೆ. ಈ ರೀತಿ ಕರ್ನಾಟಕದ ಉದ್ದಗಲಕ್ಕೂ ಬಾಂಬ್‌ಗಳನ್ನು ಸ್ಫೋಟಿಸತಕ್ಕಂಥಾದ್ದು ತುಂಬಾ ವ್ಯವಸ್ಥಿತವಾಗಿ ನಡೆಯುತ್ತಿದೆ. ಈ ಬಗ್ಗೆ ಸುಮ್ಮನೆ

ಗಾಯಾಳುಗಳನ್ನೂ, ಸರ್ಕಾರ ಒಂದು ಹೇಳಿಕೆ ಕೊಡುವುದರಿಂದ ಪ್ರಯೋಜನವಾಗುವುದಿಲ್ಲ. ಇದರ ಬಗ್ಗೆ ಸದನದಲ್ಲಿ ಸಮಗ್ರವಾಗಿ ಚರ್ಚೆಯಾಗಬೇಕು, ಮತ್ತು ಸರ್ಕಾರವು ಒಂದು ಹೇಳಿಕೆಯಿತ್ತು, ನಮ್ಮ ನೀತಿ ಏನು? ನಾವು ಏನು ಮಾಡಿದ್ದೇವೆ? ಬಾಂಬ್‌ಗಳನ್ನು ಸ್ಫೋಟಿಸುತ್ತಿರುವುದರ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ? ಇದರ ಹಿಂದಿರತಕ್ಕಂಥ ವ್ಯಕ್ತಿಗಳಾರು? ಇದರಲ್ಲಿ ಯಾವ್ಯಾವ ಶಕ್ತಿಗಳು ಅಡಗಿವೆ? ಈ ಬಗ್ಗೆ ನಮ್ಮ ಸರ್ಕಾರದಲ್ಲಿರತಕ್ಕಂಥ ಮಾಹಿತಿಗಳೇನು? ಎನ್ನುವುದರ ಬಗ್ಗೆ ವಿವರವಾದ ಮಾಹಿತಿಯನ್ನು ಹೇಳಿಕೆ ಮೂಲಕ ಸದನದ ಮುಂದಿರಬೇಕು. ಇದು ಮುಚ್ಚಿಡುವ ತಂತ್ರ ಅಲ್ಲ. ಇದು ಬಹಳ ಗಂಭೀರವಾದಂಥ ಪರಿಸ್ಥಿತಿ. ಅಧ್ಯಕ್ಷರೆ ತಮಗೆ ಹೇಳುತ್ತೇನೆ ; ಈ ಸದನಕ್ಕೆ ಬಾಂಬ್ ಇಡುತ್ತೇವೆ ಎನ್ನತಕ್ಕಂಥ ಬೆದರಿಕೆ ಸಹ ಬಂದಿದ್ದು ತಮಗೂ ಗೊತ್ತಿದೆ. ಇಷ್ಟೆಲ್ಲಾ ನಡೆದಿದ್ದರೂ ಸಹ ಈ ಕರ್ನಾಟಕ ರಾಜ್ಯದಲ್ಲಿ ಏನೂ ನಡೆದಿಲ್ಲವೇನೋ ಎನ್ನತಕ್ಕ ಸರ್ಕಾರದ ಒಂದು ಮನೋಭಾವ ಏನಿದೆ, ಅದನ್ನು ನಾನು ಒಪ್ಪುವುದಿಲ್ಲ. ನನಗನಿಸುತ್ತದೆ; ನಾವು ಪದೇ ಪದೇ ಈ ಸರ್ಕಾರವನ್ನು ಒಂದೇ ಸಮನೇ ಒತ್ತಾಯ ಮಾಡುತ್ತಿದ್ದೇವೆ. ಮುಖ್ಯಮಂತ್ರಿಗಳಿಂದ ಬರತಕ್ಕಂಥ ಭರವಸೆ ಏನು? ಅಲ್ಲದೆ, ಅವರು ಗೃಹ ಮಂತ್ರಿಯೂಗಿದ್ದಾರೆ. ನಾವು ಅದಕ್ಕೆ ಭಯ ಪಡಬೇಕಾಗಿಲ್ಲ, ನಾವು ಎಲ್ಲಾ ರೀತಿಯ ರಕ್ಷಣೆ ಕೊಟ್ಟಿದ್ದೇವೆ, ರಾಜ್ಯದ ಎಲ್ಲಾ ಗಡಿ ಮುಚ್ಚಿದ್ದೇವೆ ಎಂದು ಹೇಳಿದ್ದಾರೆ. ಗಡಿಯನ್ನು ಎಲ್ಲಿ ಮುಚ್ಚಿದ್ದಾರೆ? ಮೈಸೂರಿನಂಥ ದೊಡ್ಡ ನಗರದಲ್ಲಿ ಇವೊತ್ತು ಪ್ರತಿ ವೊಹಲ್ಲಾದಲ್ಲೂ ಬಾಂಬ್ ಸ್ಫೋಟದ ಪ್ರಕರಣಗಳಾಗುತ್ತಿವೆ. ನಿಜವಾಗಿಯೂ ಇವೊತ್ತು ಕರ್ನಾಟಕದಲ್ಲಿ ಅತ್ಯಂತ, ಅಪಾಯಕಾರಿಯಾದ ಪರಿಸ್ಥಿತಿ ಉದ್ಭವವಾಗಿದೆ. ಇದನ್ನು ಅಷ್ಟು ಲಘುವಾಗಿ ತೆಗೆದುಕೊಳ್ಳುವಂತಿಲ್ಲ. ಈ ಬಗ್ಗೆ ಸರ್ಕಾರದಲ್ಲಿ ಏನೇನು ಮಾಹಿತಿಗಳಿವೆ ಎಂಬುದನ್ನು ಮುಚ್ಚಿಡದೆ ಸಂಪೂರ್ಣವಾಗಿ ಸದನದ ಮುಂದಿಡಬೇಕು. ನಂತರ, ನಾನು ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ, ಇದರ ಬಗ್ಗೆ ಒಂದು ನಿರ್ಣಯ ಸರ್ಕಾರ ಮಂಡಿಸಲಿ ಅಥವಾ ಸರ್ಕಾರವೇ ಈ ವಿಷಯವನ್ನು ತರಲಿ; ಇದು ಸದನದಲ್ಲಿ ಚರ್ಚೆಯಾಗಬೇಕು. ಸಮಗ್ರವಾಗಿ ಚರ್ಚೆಯಾದ ನಂತರ ಈ ಬಗ್ಗೆ ಸರ್ಕಾರ ತನ್ನ ನಿರ್ಧಾರ ಏನೆಂದು ಹೇಳಬೇಕು. ಇಲ್ಲದಿದ್ದರೆ ಕರ್ನಾಟಕ ಮತ್ತೊಂದು ಭಯೋತ್ಪಾದಕ ನಗರವಾಗತಕ್ಕಂಥ ಪರಿಸ್ಥಿತಿ ಬರುತ್ತದೆ. ಭಯೋತ್ಪಾದಕರ ನೆಲೆ ಕರ್ನಾಟಕದಲ್ಲಿದೆಯೆಂಬ ಅನೇಕ ವಿಚಾರಗಳು ಹಿಂದೆಲ್ಲಾ ಕೇಳಿ ಬಂದಿದೆ. ಇಂತಹ ಪರಿಸ್ಥಿತಿಯಿರುವಾಗ ಸರ್ಕಾರ ಇದೆಲ್ಲವನ್ನೂ ಗಾಳಿಗೆ ತೂರಿ, ಈ ರಾಜ್ಯದಲ್ಲಿ ಏನೂ, ಯಾವುದೂ ನಡೆದಿಲ್ಲವೆನ್ನತಕ್ಕಂತ ರೀತಿಯಲ್ಲಿ ವರ್ತಿಸುತ್ತಿರತಕ್ಕಂಥಾದ್ದು, ಸರ್ಕಾರ ಒಂದು ಸಣ್ಣ ನೀತಿಯನ್ನಿಟ್ಟುಕೊಂಡು ಏನು ಹೋಗುತ್ತಿದೆ, ಇದು ಸರಿಯಲ್ಲ. ಜನರಿಗೆ ರಕ್ಷಣೆ ಕೊಡುವುದರಲ್ಲಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಇವತ್ತು ಇಡೀ ರಾಜ್ಯದಲ್ಲಿ ಜನಜೀವನ ಅಸ್ತವ್ಯಸ್ತವಾಗುತ್ತಿದೆ, ಜನರು ಭಯ, ಭೀತಿಯಿಂದಿದ್ದಾರೆ. ಇದನ್ನು ತಪ್ಪಿಸಲು ಸರ್ಕಾರ ಏನು ಮಾಡಿದೆಯೆಂದು ಹೇಳಬೇಕು. ಮಂತ್ರಿಗಳಿಗೆ ಬೇಕಾದರೆ ರಕ್ಷಣೆ ಸಿಗುತ್ತದೆ, ಅವರು ರಕ್ಷಣೆ ಮೇಲೆ ಎಲ್ಲಿಗೆ ಬೇಕಾದರೂ ಹೋಗಿ ಬರಬಹುದಾಗಿದೆ. ಆದರೆ, ಜನ ಸಾಮಾನ್ಯರ ಗತಿ ಏನು? ಈ ಪರಿಸ್ಥಿತಿ ಬಗ್ಗೆ ತಾವು ತೀವ್ರವಾಗಿ ಏನು ಚಿಂತನೆ ಮಾಡಿದ್ದೀರಿ? ಯಾವ ದಿಕ್ಕಿನಲ್ಲಿ ಹೋಗುತ್ತಿದ್ದೀರಿ? ಇದನ್ನು ತಡೆಯುವುದಕ್ಕೆ ನಿಮ್ಮ ಸರ್ಕಾರದಲ್ಲಿರತಕ್ಕಂಥ ಅಸ್ತ್ರಗಳಾವುವು? ನಿಮ್ಮ ನೀತಿ ಏನು? ಇದನ್ನೆಲ್ಲಾ ಬಯಲು ಮಾಡಬೇಕು. ಇದನ್ನು ಬಯಲು ಮಾಡಲಿಲ್ಲವೆಂದರೆ, ನಿಜವಾಗಿಯೂ ನಮಗೆ ನೋವಾಗುತ್ತದೆ. ದಯಮಾಡಿ ಕೂಡಲೇ ಉದ್ಭವಿಸಿರುವ ಅತ್ಯಂತ ಗಂಭೀರ ಪರಿಸ್ಥಿತಿ ಬಗ್ಗೆ ಸರ್ಕಾರ ಏನು ಹೇಳುತ್ತದೆ? ಇದರ ಬಗ್ಗೆ ತಾವು ಹೇಳಿದ ನಂತರ ಮತ್ತೆ ನಾವು ಸರ್ಕಾರಕ್ಕೆ ಏನು ಹೇಳಬೇಕೊ ಅದನ್ನು ಹೇಳುತ್ತೇವೆ. ಆದುದರಿಂದ, ಈ ಬಗ್ಗೆ ಸರ್ಕಾರ ಒಂದು ಹೇಳಿಕೆ ಕೊಡಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ. ಬರೇ ಹೇಳಿಕೆಯನ್ನು ಕೊಡುವುದು ಒಂದೇ ಅಲ್ಲ, ಇದರ ಬಗ್ಗೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ? ಯಾರ್ಯಾರನ್ನು

ಬಂಧಿಸಿದ್ದೀರಿ ಎಂಬ ಬಗ್ಗೆ ಸಹ ಹೇಳಬೇಕು. ಆದರೆ ಇವತ್ತಿನವರೆಗೂ ಸಹ ಯಾರೊಬ್ಬರನ್ನೂ ಬಂಧಿಸಿಲ್ಲ. ಈ ರೀತಿ ಬಂಧಿಸಿದ್ದೀರಿ ಎಂಬ ಬಗ್ಗೆ ಸಹ ನಡೆದಿರತಕ್ಕದನ್ನು ಬಹಳ ಲಘುವಾಗಿ ತೆಗೆದುಕೊಳ್ಳತಕ್ಕದಲ್ಲ. ಇವತ್ತು ನಮ್ಮ ಸಂಸದೀಯ ವ್ಯವಹಾರಗಳ ಸಚಿವರು ಒಂದು ವಾರದ ನಂತರ ಇದ್ದಕ್ಕಿದಂತೆ ಪ್ರತ್ಯಕ್ಷರಾಗಿದ್ದಾರೆ. ಅವರು ಹಿಂದೆ ಕೊಡುತ್ತಿದ್ದ ರೀತಿಯಲ್ಲಿಯೇ ಉತ್ತರ ಕೊಡುತ್ತಾರೆಂಬ ಭಾವನೆ ಇದೆ. ಆದರೆ ಹಿಂದೆ ಕೊಡುತ್ತಿದ್ದ ಉತ್ತರ ರೀತಿಯಲ್ಲಿಯೇ ಕೊಡುತ್ತಾರೆಂಬ ಭಾವನೆ ಇದೆ. ಆದರೆ ಅವರು ಇದರ ಬಗ್ಗೆ ಸ್ಪಷ್ಟವಾಗಿ ಸರ್ಕಾರದ ನಿಲುವನ್ನು ಹೇಳಬೇಕು, ಇದೇನೊ ಒಂದು ಸಣ್ಣ ಬಾಂಬ್ ಬಿದ್ದಿದೆ, ಯಾರೋ ಬಾಂಬ್ ಹಾಕಿದ್ದಾರೆ, ಅದನ್ನು ತಡೆಹಿಡಿದಿದ್ದೇವೆ, ಇದನ್ನು ಹೊರಗಿನವರು ಹಾಕಿಲ್ಲ, ನಮ್ಮಲ್ಲಿ ಇರತಕ್ಕವರೇ ಸಿಡಿಸಿದ್ದಾರೆ, ಅದು ಯಾವುದೋ ಪಟಾಕಿ ಎಂಬ ರೀತಿಯಲ್ಲಿ ಮಾತನಾಡಬಾರದು. ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು; ಆದರೆ ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಂಡಿಲ್ಲವೆಂದು, ನನಗನ್ನಿಸುತ್ತದೆ. ಮತ್ತು ಇವತ್ತು ಪೋಲೀಸ್ ಇಲಾಖೆಯಲ್ಲಿ ಏನು ಆಗಿದೆ ಎಂದರೆ ಅದು ಇದೆಯೋ ಅಥವಾ ಇಲ್ಲವೋ ಎಂಬುದನ್ನು ಅತ್ಯಂತ ನೋವಿನಿಂದ ಹೇಳುತ್ತಿದ್ದೇನೆ. ಮೈಸೂರಿನಲ್ಲಿ ನಡೆದಿರುವ ಘಟನೆಯ ಬಗ್ಗೆ ಸಾರ್ವಜನಿಕರಾದ ನಾವೇ ಹೋಗಿ ಇಲ್ಲಿ ಬಾಂಬ್ ಇದೆ, ತಾವು ಬಂದು ತೆಗೆದುಕೊಂಡು ಹೋಗಿ ಎಂದು ಹೇಳಬೇಕಾದಂಥ ಪರಿಸ್ಥಿತಿಯಾಗಿರ ಬೇಕಾದರೆ ನನಗೆ ಬಹಳ ನೋವಾಗುತ್ತದೆ ಅದಕ್ಕೆ ಕಾರಣವೂ ಸಹ ಇದೆ. ಅದೇನೆಂದರೆ, ಪೋಲೀಸ್ ಇಲಾಖೆಯಲ್ಲಿನ ದಕ್ಷತೆಯ ಬಗ್ಗೆ ಎಚ್ಚರಿಸಬೇಕಾಗಿದೆ; ಇವತ್ತು ಆ ಇಲಾಖೆಯಲ್ಲಿಯೇ ಗುಂಪುಗಳಾಗಿದೆ. ಆದ್ದರಿಂದ ಪೋಲೀಸ್ ಇಲಾಖೆಯಲ್ಲಿ ಕೆಲಸ ಕ್ಷೀಣವಾಗುತ್ತಿದೆ, ಇದರ ಬಗ್ಗೆ ಕೂಡ ಸರ್ಕಾರ ಚಿಂತನೆ ಮಾಡಬೇಕು. ತಮಗೆ ಗೊತ್ತಿರುವ ಹಾಗೆ ಮೈಸೂರಿನಲ್ಲಿ ಪೋಲೀಸ್ ಇಲಾಖೆಯವರೇ ಸತ್ಯಾಗ್ರಹ ಮಾಡಲು ಹೊರಟಿದ್ದಾರೆ. ಈ ಇಲಾಖೆಯಲ್ಲಿರತಕ್ಕ ಅನ್ಯಾಯಗಳನ್ನು ಸರಿಪಡಿಸಲು ಪ್ರಪ್ರಥಮವಾಗಿ ಆ ಇಲಾಖೆಯ ನೌಕರರೆ ಸತ್ಯಾಗ್ರಹಕ್ಕೆ ಹೊರಟಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ನೋಡಿದಾಗ ಪೋಲೀಸ್ ಇಲಾಖೆ ಸರ್ಕಾರದ ಅಧೀನದಲ್ಲಿ ಇದೆಯೋ? ಸರ್ಕಾರದ ಹಿಡಿತದಲ್ಲಿ ಇದೆಯೋ? ಎಂಬ ಅನುಮಾನ ಬರುತ್ತದೆ, ಸರ್ಕಾರಕ್ಕೆ ಇದರ ಬಗ್ಗೆ ಬಂದಿರತಕ್ಕ ಗುರುತುಗಳು ಏನು? ದಯಮಾಡಿ ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

* ಶ್ರೀ ಸಿ. ಬೈರೇಗೌಡ (ವೇಮಗಲ್) : ಸನ್ಮಾನ್ಯ ಅಧ್ಯಕ್ಷರೆ, ಇಂದು ಸಾಮಾನ್ಯ ಜನರು ಮನೆ ಬಿಟ್ಟು ಹೊರಗೆ ಹೋದರೆ ಮತ್ತೆ ಮನೆಗೆ ವಾಪಸ್ ಬರುತ್ತೇನೆ ಎನ್ನತಕ್ಕ ಖಾತ್ರಿ ನಮ್ಮ ರಾಜ್ಯದಲ್ಲಿ ಇಲ್ಲ. ಇದಕ್ಕೆ ಒಂದು ಸಣ್ಣ ಉದಾಹರಣೆಯನ್ನು ಕೊಡುವುದಾದರೆ ಮೊನ್ನೆ 106ನೇ ಸಂಖ್ಯೆ ಕೊಠಡಿಯಲ್ಲಿ ಸದನದ ಸಮಿತಿಯು ನಡೆಯುತ್ತಿತ್ತು. ಆಗ ಇದ್ದಕ್ಕಿದ್ದ ಹಾಗೆ 5-6 ಜನರು ಬಂದು ವಿಧಾನ ಸೌಧದಲ್ಲಿ ಬಾಂಬ್‌ನ್ನು ಇಟ್ಟಿದ್ದಾರಂತೆ. ದಯಮಾಡಿ ಸಭೆಯನ್ನು ನಡೆಸಬೇಡಿ, ಮುಂದಕ್ಕೆ ಹಾಕಿ ಎಂದು ಹೇಳಿದರು. ಆಗ ಎಲ್ಲರೂ ಚೆಲ್ಲಾಪಿಲ್ಲಿಯಾಗಿ ಹೊರಟು ಹೋದರು. ಆಗ ನಾನು ಅಲ್ಲಿರತಕ್ಕ ಅಧಿಕಾರಿಗಳಿಗೆ ಮತ್ತು ನನ್ನ ಸ್ನೇಹಿತರಿಗೆ ಹೇಳಿದೆ. ಸತ್ತರೆ ಒಂದು ಹತ್ತು ಜನರು ಸಾಯಬಹುದು, ಇದರಿಂದ ದೇಶಕ್ಕೆ ಏನೂ ಅನಾಹುತ ಆಗುವುದಿಲ್ಲ, ಆದ್ದರಿಂದ ಈ ಸಭೆಯನ್ನು ಮುಂದುವರೆಸೋಣ ಎಂದು ಹೇಳಿದೆ. ಆಗ ಯಾರು ಕೂಡ ನನ್ನ ಮಾತನ್ನು ಕೇಳಲಿಲ್ಲ. ಎಲ್ಲರೂ ಅಲ್ಲಿಂದ ಪಲಾಯನ ಮಾಡಿದರು. ಕೊನೆಗೆ ಆ ಸಭೆಯು ಮುಂದಕ್ಕೆ ಹೋಯಿತು. ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಇವತ್ತು ಇಡೀ ರಾಜ್ಯದಲ್ಲಿ ಮತ್ತು ದೇಶದಲ್ಲಿ ಇಂಥ ಭಯಾನಕ ವಾತಾವರಣ ನಿರ್ಮಾಣ ಆಗಿದೆ, ನಾನು ದೇಶದ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ನಮ್ಮ ರಾಜ್ಯಕ್ಕೆ ಸಂಬಂಧಪಟ್ಟಂತೆ ಹೇಳಬೇಕಾಗುತ್ತದೆ. ಇವತ್ತು ಸಾಮಾನ್ಯ ಜನರಿಗೆ ರಕ್ಷಣೆ ಕೊಡಬೇಕಾಗಿದೆ. ನಾವು

ರಸ್ತೆಯಲ್ಲಿ ಹೊಗಬೇಕಾದರೆ ಎಲ್ಲಿ ಏನು ಆಗುತ್ತದೋ; ಯಾವ ನಿಮಿಷದಲ್ಲಿ ಏನು ಆಗುತ್ತದೊ ; ಎಲ್ಲಿ ಬಾಂಬು ಸಿಡಿಯುವುದೋ; ಯಾರ ಶರೀರ ಹೊಡೆದು ಹೋಳು ಆಗುತ್ತದೋ ಎನ್ನತಕ್ಕ ಭೀತಿ ಇವತ್ತಿನ ದಿನ ಇದೆ. ಇವತ್ತು ಈ ಸದನದಲ್ಲಿ ನಮ್ಮ ಕೆಲವು ಸ್ನೇಹಿತರು ಮಾತನಾಡಿದ್ದಾರೆ. ಆ ರೀತಿ ಯಾರು ಮಾತನಾಡಿದ್ದಾರೋ ಅವರುಗಳು ತಮ್ಮ ಆತ್ಮ ಶೋಧನೆಯನ್ನು ಮಾಡಿಕೊಳ್ಳಬೇಕಾದ ಅವಶ್ಯಕತೆ ಇದೆ. ಈಗ ಆಗುತ್ತಿರುವ ಘಟನೆಗಳಿಗೂ ಮಸೀದಿಯನ್ನು ಕೆಡವಿ ಹಾಕಿದ್ದಕ್ಕೂ ನೇರವಾದ ಸಂಬಂಧ ಇದೆ; ನೀವು ಆವಾಗಲೇ ಮುಂದೆ ಈ ದೇಶದಲ್ಲಿ ಏನು ಆಗಬಹುದು ಎಂಬುದರ ಬಗ್ಗೆ ಯೋಚನೆ ಮಾಡಬೇಕಾಗಿತ್ತು, ಇವತ್ತು ಯಾವುದರಲ್ಲೇ ಆಗಲಿ ಆ್ಯಕ್ಷನ್ ಅಂಡ್ ರಿಯಾಕ್ಷನ್ ಇದ್ದೇ ಇರುತ್ತದೆ. ಒಂದು ಕಡೆ ಒಂದು ಕ್ರಮ ಆದರೆ ಅದಕ್ಕೆ ಪ್ರತಿಕ್ರಮ ಉದ್ಭವ ಆಗೇ ಆಗುತ್ತದೆ. ಆ ರೀತಿಯಾದ ಪ್ರತಿಕ್ರಮ ಇವತ್ತು ಇಡೀ ದೇಶದಲ್ಲಿ ಆಗುತ್ತಿದೆ. ಆದುದರಿಂದ ಇವತ್ತು ಇಡೀ ದೇಶದಲ್ಲಿ ಇಂಥ ಪ್ರಕ್ಷುಬ್ಧ ಪರಿಸ್ಥಿತಿ ಉಂಟಾಗಿದೆ. ಇಂಥ ಮತೀಯ ಭಾವನೆಗಳು ಯಾವ ಹಂತದಲ್ಲಿ ಇರಬೇಕೋ ಅದಕ್ಕಿಂತ ಮೇಲೆ, ಅದನ್ನು ಮೀರಿ ಇವತ್ತು ಮತೀಯ ಭಾವನೆಗಳು, ಧರ್ಮಾಂಧತೆಗಳು ಬೆಳೆದಿರುವುದಕ್ಕೆ ಅವರುಗಳು ಉತ್ತರ ಕೊಡಬೇಕಾಗಿರತಕ್ಕದ್ದು. ಸರ್ಕಾರ ಇದರ ಬಗ್ಗೆ ತನ್ನ ಕರ್ತವ್ಯ ಮಾಡಬೇಕಾಗಿದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ, ಆದರೆ ಇದಕ್ಕೆ ನೇರವಾಗಿ ಹೊಣೆಗಾರರು ಯಾರು ಇದ್ದಾರೆ, ಈ ದೇಶದಲ್ಲಿ ಮತಾಂಧತೆಯನ್ನು, ಧರ್ಮಾಂಧತೆಯನ್ನು ಬಿತ್ತಿ, ಬೆಳೆಸಿ ಅದಕ್ಕೆ ಪ್ರತಿ ನಿಮಿಷವೂ ನೀರನ್ನು ಎರೆಯುತ್ತಿದ್ದಾರಲ್ಲ ಅವರನ್ನು ಇವತ್ತು ಇದಕ್ಕೆ ಹೊಣೆಗಾರರನ್ನಾಗಿ ಮಾಡಬೇಕಾಗುತ್ತದೆ. ನಾನು ಈ ಸದನದಲ್ಲಿ ಹಿಂದೆ ಒಂದು ಮಾತನ್ನು ಹೇಳಿದ್ದೆ. ಏನೆಂದರೆ, ಯಾರ್‍ಯಾರು ಇದಕ್ಕೆ ಸಂಬಂಧಪಟ್ಟಿದ್ದಾರೋ ಅವರ ಕಾಲನ್ನು ಮುರಿದು ಕೈಗೆ ಕೊಡಬೇಕೆಂದು. ಅದಕ್ಕೆ ಕೆಲವರು ಇಲ್ಲಿ ಹಾಸ್ಯ ಮಾಡಿದರು. ಇವತ್ತಿನ ಪರಿಸ್ಥಿತಿಯಲ್ಲಿ ಅವರು ಯಾರೇ ಆಗಲಿ, ಎಂಥ ಜನರೇ ಆಗಿರಲಿ, ಈ ಮತಾಂಧತೆಯನ್ನು ಬೆಳೆಸತಕ್ಕವರ ಕಾಲನ್ನು ಮುರಿದು ಕೈಗೆ ಕೊಡತಕ್ಕ ಅವಶ್ಯಕತೆ ಬಂದಿದೆ. ಏಕೆಂದರೆ ಈ ಹಿಡಿಯಷ್ಟು ಇರತಕ್ಕವರು ಹಿಂದುಧರ್ಮವನ್ನು ಗುತ್ತಿಗೆಗೆ ಪಡೆದುಕೊಂಡಿರುವವರು, ಇದಕ್ಕೆ ಜವಾಬ್ದಾರಿಯಾಗ ಬೇಕಾಗುತ್ತದೆ. ಪ್ರತಿಯೊಂದಕ್ಕೂ ಅವರು ಇವತ್ತಿನ ದಿವಸ ಉತ್ತರವನ್ನು ಕೊಡಬೇಕಾಗುತ್ತದೆ. ಪ್ರತಿಯೊಂದಕ್ಕೂ ಕೂಡ ಒಂದು ಮಿತಿ ಇದೆ, ಆದರೆ ಇವತ್ತು ಆ ಮಿತಿ ಇಲ್ಲದ ರೀತಿಯಲ್ಲಿ ಇವತ್ತಿನ ದಿವಸ ದೇಶದಲ್ಲಿ ವ್ಯವಹಾರವನ್ನು ನಡೆಸುತ್ತಾ ಹೋದರೆ ಏನು ಗತಿ? ದೇಶದ ಸಾಮಾನ್ಯ ಜನರ ಗತಿ ಏನಾಗಬೇಕು? ಆದುದರಿಂದ ಸರ್ಕಾರಕ್ಕೆ ಏನಾದರೂ ಕಿಂಚಿತ್ತು ಜವಾಬ್ದಾರಿ ಇದ್ದರೆ ಯಾರು ಕಾರಣಕರ್ತರಿದ್ದಾರೆ ಅವರಿಗೆ ಶಿಕೆ ವಿಧಿಸಬೇಕು, ನಾವು, ನೀವು, ಈ ಸದನ ಎಲ್ಲದಕ್ಕಿಂತ ಈ ದೇಶ ದೊಡ್ಡದು. ಆದ್ದರಿಂದ ಈ ದೇಶ ಉಳಿಯಬೇಕು.

11.45 ಎ.ಎಂ

ಇದನ್ನು ಉಳಿಸಬೇಕಾದ ಕೆಲಸವನ್ನು ನಾವು ಮಾಡಬೇಕಾಗಿದೆ. ಈ ದಿಸೆಯಲ್ಲಿ 10 ಜನರ ಕಾಲು ಮುರಿದರೆ ಏನೂ ಆಗುವುದಿಲ್ಲ. 10 ಜನರ ಪ್ರಾಣ ಹೋದರೂ ಏನೂ ಆಗುವುದಿಲ್ಲ. ಕೆಲಸವನ್ನು ಇವತ್ತು ಮಾಡಬೇಕಾಗಿದೆ. ಇಲ್ಲದಿದ್ದರೆ ಇಡೀ ದೇಶವೇ ಛಿದ್ರಛಿದ್ರವಾಗುವ ಪರಿಸ್ಥಿತಿ ಬರುತ್ತದೆ. ಇದನ್ನು ನೋಡಿಕೊಂಡು ಸುಮ್ಮನೆ ಕುಳಿತು ಕೊಳ್ಳುವುದಕ್ಕೆ ಆಗುವುದಿಲ್ಲ. ನೀವು ಈ ರಾಜ್ಯದ ಜವಾಬ್ದಾರಿಯನ್ನು ಹೊತ್ತಿದ್ದೀರಿ. ಶಿಸ್ತು ಸಂಯಮವನ್ನು ಪಾಲನೆ ಮಾಡತಕ್ಕ ಜವಾಬ್ದಾರಿಯನ್ನು ಹೊತ್ತಿರತಕ್ಕ ಸರ್ಕಾರ ಇಲ್ಲಿದೆ. ನಿಮಗೆ ಜವಾಬ್ದಾರಿ ಇದ್ದರೆ, ಅವರು ಯಾರೇ ಆಗಿರಲಿ, ಯಾವ ಧರ್ಮಕ್ಕೆ ಸೇರಿದವರಾಗಿರಲಿ, ಅವರು ಹಿಂದುವಾಗಲಿ, ಮುಸ್ಲೀಮರಾಗಲೀ, ಕ್ರೈಸ್ತರಾಗಲಿ, ಸಿಖ್

ಆಗಿರಲಿ, 4 ಜನರ ಕಾಲನ್ನು ಮುರಿದು ಕೈ ಕೊಟ್ಟರೆ ಅವರಿಗೆ ಆಗ ಅರಿವಾಗುತ್ತದೆ. ಆ ಕೆಲಸನ್ನು ತಾವು ಇವತ್ತು ಮಾಡಿಲ್ಲ. ಎಲ್ಲೋ ಒಂದು ಬಾಂಬ್ ಇವತ್ತು ಸಿಡಿಯುತ್ತದೆ. ವಿಧಾನಸೌಧಕ್ಕೆ ಬಾಂಬನ್ನು ಸಿಡಿಸುವ ಪ್ರಯತ್ನ ನಡೆದಿದ್ದು ತಮಗೆ ಗೊತ್ತಿಲ್ಲವೆ? ಅವತ್ತು ನಾವೆಲ್ಲರೂ ಈ ವಿಧಾನ ಸೌಧದಿಂದ ಹೊರಗೆ ಓಡಬೇಕಾದ ಪರಿಸ್ಥಿತಿ ಬಂತು. ಇವತ್ತು ಈ ವಿಧಾನ ಸೌಧಕ್ಕೆ ಈ ಒಂದು ಪರಿಸ್ಥಿತಿ ಬಂದಿರಬೇಕಾದರೆ ಇನ್ನು ಭಟ್ಕಲ್ , ಬೆಳಗಾಂ, ಮೈಸೂರು ಹೀಗೆ ಇನ್ನೂ ಬೇರೆ ಯಾವುದೇ ಕಡೆಯಲ್ಲಾಗಲಿ ನಾವು ಹೀಗೇ ಬಿಟ್ಟರೆ ಅದು ಏನಾಗಬಹುದು? ಇಡೀ ರಾಜ್ಯಾದ್ಯಂತ ಇದು ಹರಡುತ್ತದೆ. ತಾವು ಸ್ವಲ್ಪ ದಿವಸ ಬೇರೆ ಯಾವುದೇ ಕೆಲಸವನ್ನು ಮಾಡದಿದ್ದರೂ ಪರವಾಗಿಲ್ಲ; ಇವತ್ತು ಈ ಬಾಂಬ್ ಪ್ರಕರಣದ ಕೆಲಸಗಳು ರಾಜ್ಯದಲ್ಲಿ ಏನು ನಡೆಯುತ್ತಿದೆ ಇದನ್ನು ಮೊದಲು ಮಟ್ಟ ಹಾಕತಕ್ಕ ಕೆಲಸಕ್ಕೆ ಪ್ರಥಮ ಗಮನ ಕೊಡಬೇಕೆಂದು ತಮ್ಮ ಮೂಲಕ ನಾನು ವಿನಂತಿಮಾಡಿಕೊಳ್ಳುತ್ತೇನೆ. ಇದಕ್ಕೆ ಮೊದಲ ಆದ್ಯತೆಯನ್ನು ಕೊಟ್ಟು ಜನಸಾಮಾನ್ಯರನ್ನು ರಕ್ಷಣೆ ಮಾಡಬೇಕೆಂದು ಮತ್ತೊಮ್ಮೆ ತಮ್ಮ ಮುಖಾಂತರ ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

* ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರಾದ ದೇಶಪಾಂಡೆಯವರು, ಈಶ್ವರಪ್ಪನವರು, ವಾಟಾಳ್ ನಾಗರಾಜರವರು, ಹಾಗೂ ಮಾನ್ಯ ಬೈರೇಗೌಡರು ಬಹಳ ಗಂಭೀರವಾದ ವಿಚಾರವನ್ನು ಸಭೆಯ ಮುಂದೆ ಎತ್ತಿದ್ದಾರೆ. ಸರ್ಕಾರ ಈ ವಿಚಾರವನ್ನು ಲಘುವಾಗಿ ತೆಗೆದುಕೊಂಡಿಲ್ಲ. ಅತ್ಯಂತ ತೀವ್ರವಾದ ಗಮನವನ್ನು ಸರ್ಕಾರ ಇದರ ಬಗ್ಗೆ ಹರಿಸಿದೆ. ಇದೇ ರೀತಿಯಲ್ಲಿ ಇದು ಮುಂದುವರಿದರೆ ದೇಶಕ್ಕೇ ಅಪಾಯವಿದೆ ಎಂಬುದು ಸರ್ಕಾರಕ್ಕೆ ಗೊತ್ತಿದೆ. ಆದರೆ ಮಾನ್ಯ ಸದಸ್ಯರು ಮಾತನಾಡುತ್ತಾ ಎಷ್ಟು ಜನರನ್ನು ನೀವು ದಸ್ತಗಿರಿ ಮಾಡಿದ್ದೀರಿ? ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? ಇದರ ಮೂಲ ಏನು? ಇದನ್ನು ಯಾರು ಮಾಡುತ್ತಿದ್ದಾರೆ? ಮಿಲಿಟರಿಗೆ ಸೇರಿದಂಥ ಬಾಂಬೇ ಇದು ಹೀಗೆ ಇನ್ನೂ ಮುಂತಾದ ವಿವರಗಳನ್ನು ಕೇಳಿದ್ದಾರೆ. ಇದಕ್ಕೆ ಸೂಕ್ತವಾದ ವಿವರಗಳನ್ನು ಇವತ್ತು ಸಂಜೆಯೊಳಗಾಗಿ ತರಿಸಿಕೊಂಡು ಒಂದು ಹೇಳಿಕೆಯನ್ನು ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ಜವಾಬ್ದಾರಿ ಇಲ್ಲ ಎನ್ನತಕ್ಕದ್ದು ಇದೊಂದರಿಂದಲೇ ಗೊತ್ತಾಗುತ್ತಿದೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಸಂಜೆಯೊಳಗಾಗಿ ಮಾಹಿತಿಯನ್ನು ತರಿಸುತ್ತಾರಂತೆ. ಹಾಗಾದರೆ ನೀವು ಇಲ್ಲಿ ಏತಕ್ಕೆ ಕುಳಿತಿದ್ದೀರಿ? ಎದ್ದು ಮನೆಗೆ ಹೋಗಿ .....

ಶ್ರೀ ವಾಟಾಳ್ ನಾಗರಾಜ್ : ಸರ್ಕಾರದಿಂದ ಜನಸಾಮಾನ್ಯರಿಗೆ ರಕ್ಷಣೆ ಇಲ್ಲ ಎಂಬುದು ಇದರಲ್ಲೇ ಗೊತ್ತಾಗುತ್ತದೆ? ಇವತ್ತು ಸಂಜೆಯೊಳಗೆ ಇವರು ಏನು ಉತ್ತರವನ್ನು ಹೇಳುತ್ತಾರೆ ಸ್ವಾಮಿ? ಇಷ್ಟು ಹೊತ್ತಿಗೆ ಇವರ ಉತ್ತರ ಸಿದ್ಧವಾಗಿರಬೇಡವೆ? ನಿನ್ನೆ ಮೈಸೂರಿನಲ್ಲಾಗಿದೆ, ಮೊನ್ನೆ ಬೆಳಗಾಂನಲ್ಲಿ ಆಗಿದೆ. ಇಷ್ಟಾದರೂ ಇವರಲ್ಲಿ ಉತ್ತರವಿಲ್ಲ ಎಂದರೆ ಹೇಗೆ? ಪೋಲೀಸ್ ಇಲಾಖೆಯಿಂದ ಮಾಹಿತಿ ಬರುವವರೆಗೂ ಇವರಿಂದ ಯಾವುದೇ ಉತ್ತರವೂ ಇಲ್ಲವೆಂದರೆ ಈ ಸರ್ಕಾರ ಇದೆಯೇ ಇಲ್ಲವೇ? ಎಂಬ ಅನುಮಾನ ಬರುತ್ತದೆ. ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳ ಬಗ್ಗೆ ನನಗೆ ಬಹಳವಾದ ಗೌರವ ಇದೆ. ಆದರೆ ಈ ರೀತಿ ಘನ್ಯ ಮಂತ್ರಿಗಳು ಉತ್ತರ ಹೇಳತಕ್ಕದ್ದು ಒಳ್ಳೆಯದಲ್ಲ.

ಶ್ರೀ ಆರ್. ವಿ. ದೇಶಪಾಂಡೆ : ಮಾನ್ಯ ಸಭಾಧ್ಯಕ್ಷರೆ, ಈ ಘಟನೆ ಸಡನ್ ಆಗಿ ಆಗಿದ್ದಿದ್ದರೆ ಮಾನ್ಯ ಮಂತ್ರಿಗಳು ಸಂಜೆ ಉತ್ತರ ಹೇಳುತ್ತೇನೆಂದು ಹೇಳಬಹುದಿತ್ತು. ಅದನ್ನು ನಾವೂ ಕೂಡ ಒಪ್ಪಿಕೊಳ್ಳಬಹುದಿತ್ತು. ಆದರೆ ಭಟ್ಕಳದಲ್ಲಿ ಆಗಿರತಕ್ಕದ್ದು 1ನೇ ತಾರೀಖು. ಮೈಸೂರಿನಲ್ಲಿ ಪೋಲೀಸರು ಬಾಂಬನ್ನು ಸೀಸ್ ಮಾಡಿದ್ದಾರೆ. ಬೆಳಗಾಂನಲ್ಲಿ ನಿನ್ನೆ ಗಲಾಟೆ ಆಗಿದೆ. ಇದೆಲ್ಲಾ ಸರ್ಕಾರಕ್ಕೆ ಗೊತ್ತಿರುವುದರಿಂದ ಇಷ್ಟು ಹೊತ್ತಿಗೆ ಎಲ್ಲ ಮಾಹಿತಿಗಳನ್ನೂ ಸಂಗ್ರಹಿಸಿಕೊಂಡು ರೆಡಿ ಇರಬೇಕಾಗಿತ್ತು. ಇವತ್ತು ಇದನ್ನೆಲ್ಲಾ ನೋಡಿದರೆ ಸರ್ಕಾರಕ್ಕೆ ಇದರ ಬಗ್ಗೆ ಯಾವುದೇ ಜವಾಬ್ದಾರಿ ಇಲ್ಲ. ಸರ್ಕಾರ ಈ ಸದನವನ್ನು ಬಹಳ ಲಘುವಾಗಿ ತೆಗೆದುಕೊಂಡಿದೆ. ನಮಗೆ ಮನಸ್ಸು ಬಂದರೆ ಹೇಳುತ್ತೇವೆ, ಇಲ್ಲದಿದ್ದರೆ ಇಲ್ಲ ಎಂದು ಹೇಳುವಂಥ ಧೋರಣೆ ಇದೆಯೆಂದು ಅರ್ಥವಾಗುತ್ತದೆ. ಇಷ್ಟು ಹೊತ್ತಿಗೆ ಸರ್ಕಾರದಲ್ಲಿ ಎಲ್ಲ ಮಾಹಿತಿ ಇರಬೇಕಾಗಿತ್ತು. ಆ ಮಾಹಿತಿ ತಮ್ಮಲ್ಲಿಲ್ಲ ಎಂದರೆ, ಆ ಇಲಾಖೆಯ ಮೇಲೆ ಸರ್ಕಾರದ ಹಿಡಿತ ಇಲ್ಲ, ಅಧಿಕಾರಿಗಳು ಬೇಜವಾಬ್ದಾರಿಯಿಂದಿದ್ದಾರೆ, ಅಷ್ಟೇ ಅಲ್ಲ, ಇದನ್ನೆಲ್ಲ ನೋಡಲು ತಮಗೂ ಸಮಯವಿಲ್ಲ. ನಾನಾದರೂ ತಮ್ಮ ಮೂಲಕ ಒತ್ತಾಯ ಮಾಡುತ್ತೇನೆ, ಸರ್ಕಾರದಲ್ಲಿ ಉತ್ತರ ಇದ್ದರೆ ಹೇಳಬೇಕು, ಇಲ್ಲದಿದ್ದರೆ ತಕ್ಷಣ ಮಾಹಿತಿ ತರಿಸಿಕೊಂಡು ಉತ್ತರ ನೀಡಬೇಕು.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಮಾನ್ಯ ಸದಸ್ಯರು ಕೇಳಿರತಕ್ಕಂಥ ಇನ್‌ಫರ್‌ಮೇಷನ್ ಸರ್ಕಾರದಲ್ಲಿದೆ. ಅದನ್ನೆಲ್ಲ ಕನ್‌ಸಾಲಿಡೇಟ್ ಮಾಡಿ ಒಂದು ಹೇಳಿಕೆಯನ್ನು ತಯಾರು ಮಾಡ ಬೇಕಾಗಿದೆ. ಅದು ತಯಾರಾದ ತಕ್ಷಣ ಕೊಡುತ್ತೇವೆ. What I appeal to the Hon'ble Members is not to create a panic situation... ನಮ್ಮ ಮಾನ್ಯ ಬೈರೇಗೌಡರು ಹೇಳಿದ ವಿಷಯ ಬಹಳ ಜವಾಬ್ದಾರಿಯಾದಂಥ ವಿಷಯ ಹಾಗೂ ಬಹಳ ಮುಖ್ಯವಾದಂಥ ವಿಷಯ. ಆದರೆ ಮನೆ ಬಿಟ್ಟು ಹೊರಟರೆ ಸಂಜೆಯೊಳಗೆ ಮನೆಗೆ ಬರುತ್ತಾರೋ ಇಲ್ಲವೋ ಎಂದು ಅವರು ಏನು ಹೇಳಿದರು, ಅಂಥ ಪರಿಸ್ಥಿತಿ ಏನೂ ಇಲ್ಲ. ಏತಕ್ಕೆಂದರೆ ನೀವುಗಳು ಈ ಸಭೆಯಲ್ಲಿ ಏನು ಹೇಳುತ್ತೀರೋ ಅದು ಇಡೀ ರಾಜ್ಯಕ್ಕೆ ವ್ಯಾಪಿಸುತ್ತದೆ. ಅದರ ಪರಿಣಾಮ ಏನಾಗುತ್ತದೋ ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಿ. ತಾವು ಇನ್ನೊಂದು ಮಾತನ್ನು ಏನು ಹೇಳಿದಿರಿ ಅದು ಬಹಳ ಯೋಗ್ಯವಾದಂಥ ಮಾತು. 10 ಜನ ಸತ್ತುಹೋದರೂ ಚಿಂತೆ ಇಲ್ಲ, ಸಭೆಯನ್ನು ನಡೆಸೋಣವೆಂದು ಹೇಳಿದಿರಿ. ಅದು ನಿಜವಾಗಿಯೂ ಗಂಡಸ್ತನದ ಮಾತು, ನಾವು ಭಾರತೀಯರೆಲ್ಲರೂ ಮಾಡಬೇಕಾದಂಥ ಕೆಲಸ ಅದು. ಅದಕ್ಕೆ ಸಂಪೂರ್ಣವಾದಂಥ ಬೆಂಬಲಕೊಟ್ಟು ತಮ್ಮನ್ನು ಮೆಚ್ಚುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಹಾಗಿದ್ದರೂ ಸಭೆಯನ್ನು ಅಂದು ಏತಕ್ಕೆ ಮುಂದಕ್ಕೆ ಹಾಕಿದಿರಿ. 5 ಗಂಟೆಗೆ ಸಭೆಯನ್ನು ಏತಕ್ಕೆ ಮುಂದಕ್ಕೆ ಹಾಕಿದಿರಿ, ನಾವು ತಯಾರಾಗಿದ್ದವಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ತಮಗೆ ಗೊತ್ತಿರಬಹುದು, ನಾನು ಕೂಡ ಆವತ್ತು ಮಾನ್ಯ ಬೈರೇಗೌಡರು ಹೇಳಿದಹಾಗೆ ಸಭೆಯನ್ನು ಮುಂದಕ್ಕೆ ಹಾಕುವುದು ಬೇಡ, ಏನಾದರಾಗಲಿ ನಡೆಸಬೇಕು ಎಂದು ಹೇಳಿದೆ. ಇದು ಪೋಲೀಸನವರಿಗೆ ಏನಾಗುತ್ತದೆ ಎಂದರೆ ಏನಾದರೂ ವ್ಯತ್ಯಾಸವಾದರೆ ನಮ್ಮ ಇಡೀ ಪೋಲೀಸ್ ಇಲಾಖೆಗೇ ಕೆಟ್ಟ ಹೆಸರು ಬರುತ್ತದೆ, ಮತ್ತು ಇದನ್ನು ಪ್ರಿವೆಂಟ್ ಮಾಡಲಿಲ್ಲವೆಂದು ಅವರ ಆತಂಕವನ್ನು, ಅವರ ಕಷ್ಟವನ್ನು ನಾವು ಅರ್ಥಮಾಡಿಕೊಳ್ಳಬೇಕು. prevention is better than cure ಅವರು ಮುಂದೇನಾದರೂ ಅಪಘಾತವಾಗಬಹುದೆನ್ನುವುದಕ್ಕೋಸ್ಕರ ಅವರದು ಪ್ಯಾನಿಕ್

ಸಿಚ್ಯುಯೇಷನ್; ಅಷ್ಟಾಗಬೇಕಾಗಿರಲಿಲ್ಲ ಎನ್ನುವುದು ನನ್ನ ಸ್ವಂತ ಅಭಿಪ್ರಾಯ. ಆದರೆ ರಕ್ಷಣೆಯನ್ನು, ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಜನ ಸ್ವಲ್ಪ ಅವರು ಹೆಚ್ಚಿನ ಕಾಳಜಿಯನ್ನು ತೆಗೆದುಕೊಳ್ಳುತ್ತಾರೆ. ಆದ್ದರಿಂದ ನಾನು ತಮಗೆ ಅಪೀಲ್ ಮಾಡಿಕೊಳ್ಳುತ್ತೇನೆ. ನಾವು ನೀವು ಎಲ್ಲ ಸೇರಿ ಇಂಥ ಕೃತ್ಯಗಳನ್ನು ಮುಂದೆ ನಡೆಯುವುದಕ್ಕೆ ಬಿಟ್ಟರೆ ಈ ದೇಶದ ಭದ್ರತೆಗೆ ತೊಂದರೆಯಾಗುತ್ತದೆ. ಇದಕ್ಕೆ ಏನೇನು ಕ್ರಮ ತೆಗೆದುಕೊಂಡಿದ್ದಾರೆ, ಯಾರು ಯಾರನ್ನು ಅರೆಸ್ಟ್ ಮಾಡಿದ್ದಾರೆ, ಏಕೆ ಮಾಡಲಿಲ್ಲವೆಂದು ಶ್ರೀಮಾನ್ ಈಶ್ವರಪ್ಪನವರು ಮಾತನಾಡುತ್ತಾ ಕೇಳಿದರು; ಮಾನ್ಯ ದೇಶಪಾಂಡೆಯವರು ಕೇಳಿದರು. ಅದನ್ನು ಹೊತ್ತುಕೊಂಡು ಹೋಗುತ್ತಿದ್ದವರು ಸಿಕ್ಕಿದರೂ ತಪ್ಪಿಸಿಕೊಂಡು ಹೋದರೂ ಏನು ಕ್ರಮ ತೆಗೆದುಕೊಂಡಿಲ್ಲವೆಂದು ಹೇಳಿದರು ಇದು ನಿಜವೇ ಅಲ್ಲವೇ ಎನ್ನುವುದನ್ನೆಲ್ಲಾ ನೋಡಿ, ಹೇಳಲು ದಯವಿಟ್ಟು ಸ್ವಲ್ಪ ಸಂಜೆಯವರೆಗೆ ತಾವು ಕಾಲಾವಕಾಶ ಕೊಡಬೇಕು. ಅದರ ಮೇಲೆ ಮುಂದೆ ಏನಾದರೂ ಬೇರೆ ರೀತಿ ಕ್ರಮ ತೆಗೆದುಕೊಳ್ಳಬೇಕೆಂದರೆ ಅದನ್ನೂ ತೆಗೆದುಕೊಳ್ಳೋಣ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಸರ್ಕಾರದ ಬೇಜವಾಬ್ದಾರಿ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗವನ್ನು ಮಾಡುತ್ತೇನೆ. ಈ ರೀತಿ ಉತ್ತರದಿಂದ ನನಗೆ ನಾಚಿಕೆಯಾಗುತ್ತದೆ. ಸರ್ಕಾರ ಇದೆಯೇ ಇಲ್ಲವೇ ಎಂದು ಕೇಳಬೇಕಾಗಿದೆ. ಪ್ರತಿದಿವಸ ಬಾಂಬ್‌ಗಳು ಸಿಡಿಯುತ್ತಿವೆ. ನಾವು ಸಾಯಂಕಾಲ ಹೇಳಿಕೆಯನ್ನು ಕೊಡುತ್ತೇವೆ, ನಾಳೆದಿವಸ ಹೇಳಿಕೆಯನ್ನು ಕೊಡುತ್ತೇವೆ ಎಂದರೆ ಇದು ಬೇಜವಾಬ್ದಾರಿತನ ತೋರಿಸುತ್ತದೆ. ಸರ್ಕಾರಕ್ಕೆ ನಿಜವಾಗಿಯೂ ಕಾಳಜಿ ಇಲ್ಲವೆಂದು ಹೇಳಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.)

ಶ್ರೀ ಹಾರನಹಳ್ಳಿ ರಾಮಸ್ವಾಮಿ : ದಯವಿಟ್ಟು ಇದಕ್ಕೆ ರಾಜಕೀಯ ಉಪಯೋಗ ಮಾಡಬೇಡಿ. ಇದು ರಾಜ್ಯದ ರಕ್ಷಣೆಯ ವಿಚಾರ, ರಾಜಕೀಯ ಉಪಯೋಗ ಮಾಡಬೇಡಿ ಎಂದು ಹೇಳುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ : ಇದು ಒಂದನೇ ತಾರೀಖು ಆದದ್ದು, ತಮ್ಮ ಗಮನಕ್ಕೆ ತಂದಿರುತ್ತೇವೆ.

ಅಧ್ಯಕ್ಷರು : ಸಂಜೆಯಾಳಗಾಗಿ ಉತ್ತರ ಕೊಡುತ್ತೇವೆಂದು ಮಾನ್ಯ ಸಚಿವರು ಹೇಳಿದ್ದಾರೆ.

ಶ್ರೀ ಕೆ. ಎಸ್. ಈಶ್ವರಪ್ಪ : ಸಂಜೆ ಕೊಡಲಿ ನಾನು ಬೇಡವೆನ್ನುವುದಿಲ್ಲ. ಈ ಘಟನೆಯಾಗಿ 5 ದಿವಸಗಳಾಗಿವೆ. ಹತ್ತು ಜನ ಹಿಂದುಗಳಿಗೆ ಸ್ಟಾಬ್ ಮಾಡಿ ಆಸ್ಪತ್ರೆಯಲ್ಲಿದ್ದಾರೆ. ನಾವು ಸ್ಪಷ್ಟವಾಗಿ ಹೇಳಿದ್ದೇವೆ. ವಿರೋಧಪಕ್ಷದ ನಾಯಕರು ಅಲ್ಲಿಗೆ ಹೋಗಲಿಕ್ಕೆ ಆಗಲಿಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರನ್ನು ನಾನು ಅತ್ಯಂತ ವಿನಯದಿಂದ ಬೇಡಿಕೊಳ್ಳುವುದೇನೆಂದರೆ, ಯಾವ ಜಾತಿಯವರಿಗೇ ಗಾಯವಾಗಿರಲಿ ಏನೇ ಆಗಿರಲಿ, ಯಾವ ಪತ್ರಿಕೆಯವರೂ ಅದನ್ನೆಲ್ಲಾ ಹಾಕುವುದಿಲ್ಲ. ನಾವು ಒಂದು ನಾರಮ್ಸ್‌ನ್ನು, ಒಂದು ಸಂಪ್ರದಾಯವನ್ನು ಈ ದೇಶದಲ್ಲಿ ಹಾಕಿಕೊಂಡು ಬಂದಿದ್ದೇವೆ.

ಅನೇಕ ಜನರಿಗೆ ತೊಂದರೆಯಾಗಿದೆ. ಆದರೆ ಸಭೆಯಲ್ಲಿ ಹೇಳುವಾಗ, ಪತ್ರಿಕೆಯವರಿಗೆ ಹೇಳುವಾಗ, ಇಂತಿಂಥ ಜಾತಿಯವರಿಗೆ ಗಾಯವಾಗಿದೆ ಎನ್ನುವ ಮಾತನ್ನು ನಾವು ಆಡುವುದು ಬೇಡ. ಅದು ಎಲ್ಲರಿಗೂ ಗೊತ್ತಿರುತ್ತದೆ.

ಪ್ರೊ ಎಂ. ಡಿ. ನಂಜುಂಡಸ್ವಾಮಿ : ಕಾನೂನು ಮಂತ್ರಿಗಳೇ, ಒಂದು ನಿಮಿಷ. 10 ಜನ ಹಿಂದುಗಳಿಗೆ ಚೂರಿ ಬಿದ್ದಿದೆ, ಚೂರಿ ಬಿದ್ದಿದೆ ಎಂದು ನಮ್ಮ ಈಶ್ವರಪ್ಪನವರು ಹೇಳುತ್ತಿದ್ದಾರೆ. ಸಭಾಧ್ಯಕ್ಷರೇ, ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಆ ಹತ್ತು ಜನರ ಹೆಸರು ಸಾಯಂಕಾಲ ನಿಮ್ಮ ಉತ್ತರದಲ್ಲಿ ಬಂದರೆ ಒಳ್ಳೆಯದು. ಸುಮ್ಮನೆ ಹಿಂದುಗಳು ಎಂದು ಹೇಳುತ್ತಾರೆ. ಅಲ್ಲೆಲ್ಲ ಚೂರಿ ಹಾಕಿಸಿಕೊಂಡವರು ಶೂದ್ರರೆ, ಒಬ್ಬ ಬ್ರಾಹ್ಮಣನಿಗೂ ಚೂರಿ ಬಿದ್ದಿರುವುದಿಲ್ಲ. ಅದು ಬಹಳ ಮುಖ್ಯವಾಗುತ್ತದೆ. ನಮ್ಮ ಮುಸ್ಲಿಂ ಬಾಂಧವರಿಗೂ ಈ ಮಾತನ್ನು ತಿಳಿಸಬೇಕು. ಹಾಗೆ ಯಾರು ಹಿಂದುಗಳು ಎಂದು ತಿಳಿದುಕೊಂಡಿದ್ದಾರೆ, ನಮ್ಮ ಶೂದ್ರಗೆಳೆಯರು ಅವರಿಗೂ ತಿಳಿಸಬೇಕಾಗುತ್ತದೆ. ಆದ್ದರಿಂದ 10 ಜನ ಯಾರಿಗೆ ಚೂರಿ ಬಿದ್ದಿವೆ ಅವರು ಯಾವ ಯಾವ ಜಾತಿಗೆ ಸೇರಿದವರು ಎನ್ನುವುದನ್ನು ಸ್ವಲ್ಪ ನನಗೆ ತಿಳಿಸಿಕೊಡಬೇಕೆಂದು ತಮ್ಮ ಮೂಲಕ ವಿನಂತಿ ಮಾಡಿ ಕೊಳ್ಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ : ಹಾಗಿದ್ದರೆ, ನೀವು ಬ್ರಾಹ್ಮಣರಿಗೆ ಚೂರಿ ಹಾಕಬೇಕೆಂದು ಹೇಳುವುದಕ್ಕೆ ಹೊರಟರೇನು? ಮಾನ್ಯ ನಂಜುಂಡಸ್ವಾಮಿಯವರು ಹೇಳಿದ್ದರಲ್ಲಿ ಒಂದು ಪಾಯಿಂಟ್ ಇದೆ. ಪಾಪ, ಯಾರು ಚೂರಿ ಏಟಿಗೆ ಬಲಿಬಿದ್ದಿದ್ದಾರಲ್ಲ ಅವರು ಅತಿ ಬಡಜನರು, ಹಿಂದುಳಿದ ಜನಾಂಗದವರು ಅದು ಎರಡೂ ಕಡೆಯಾಗುತ್ತದೆ. ನಾಮದಾರಿ ಸಮಾಜದವರು, ಮತ್ತು ಈಡಿಗಾ ಸಮಾಜದಲ್ಲಿ ಇದು ಆಗಿದೆ. ಅವರು ಬಡವರು, ಅವರ ಮೇಲೆ ಅನ್ಯಾಯವಾಗಿದೆ. ಮೇಲ್‌ವರ್ಗದವರ ಮೇಲೆ ಅನ್ಯಾಯವಾಗಿರುವುದು ನನಗೆ ಕಂಡುಬಂದಿಲ್ಲ. ಅದಕ್ಕಿಂತ ಮೊದಲು ಚೂರಿ ಯಾರಿಗೂ ಹಾಕಬಾರದು, ಅದು ಮೇಲ್‌ವರ್ಗದವರ ಮೇಲಾಗಲಿ, ಹಿಂದುಳಿದ ವರ್ಗದವರ ಮೇಲಾಗಲಿ, ಅದರಲ್ಲಿ ವ್ಯತ್ಯಾಸ ಮಾಡಲಿಕ್ಕೆ ಆಗುವುದಿಲ್ಲ. ಬ್ರಾಹ್ಮಣರಿಗೆ ಚೂರಿ ಹಾಕಿ ಎಂದು ಏತಕ್ಕೆ ಹೇಳಲಿಕ್ಕೆ ಹೊರಟಿದ್ದಾರೋ ನನಗಂತೂ ಗೊತ್ತಾಗುತ್ತಿಲ್ಲ. ಅದೇನೆ ಇರಲಿ, ಎರಡೂ ಕಡೆ ಹೀಗಾಗಿದೆ.

ಶ್ರೀ ಕೆ. ಎಸ್. ಈಶ್ವರಪ್ಪ : ಸರ್ಕಾರಕ್ಕೆ ಕೇಳುವುದು ಇಷ್ಟೆ, ನೀವು ಪರಿಹಾರ ಕೊಡುವ ದಿಕ್ಕಿನಲ್ಲಿ ಎಷ್ಟು ಪ್ರಯತ್ನ ಮಾಡುತ್ತಿದ್ದೀರಿ? ಒಂದೂವರೆ ಸಾವಿರ ರೂಪಾಯಿ ಪರಿಹಾರ ಕೊಟ್ಟಿದ್ದಾರೆ, ಇವರಿಗೆ ಏನೂ ಅನ್ನಿಸುವುದಿಲ್ಲವೆ? ಒಂದೂವರೆ ಸಾವಿರ ರೂಪಾಯಿಂದ ಏನು ಮಾಡುವುದಕ್ಕೆ ಕೊಟ್ಟಿದ್ದಾರೆ ? ಅದಕ್ಕೋಸ್ಕರ ನಾನು ಸರ್ಕಾರಕ್ಕೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹೆಚ್ಚಿನ ಪರಿಹಾರ ಕೊಡುವ ದಿಕ್ಕಿನಲ್ಲಿ ತಾವು ಪ್ರಯತ್ನ ಮಾಡಬೇಕು. ಎರಡನೆಯದಾಗಿ, ಇದರ ಹಿಂದೆ ದೊಡ್ಡ ಷಡ್ಯಂತ್ರ ಇದೆ. ಪತ್ರಿಕೆಯಲ್ಲಿ ಸ್ಪಷ್ಟವಾಗಿ ಬಂದಿದೆ. ಇಡೀ ದೇಶದ ಬಾಂಬ್ ಪ್ರಕರಣದಲ್ಲಿ ಪಾಕಿಸ್ತಾನದ ಕೈವಾಡ ಇದೆ ಎಂದು ಬಂದಿದೆ. ಸರ್ಕಾರ ಈ ದಿಕ್ಕಿನಲ್ಲಿ ಏನು ಪ್ರಯತ್ನ ಮಾಡುತ್ತಿದೆ? ಈ ಬಗ್ಗೆ ಸಾಯಂಕಾಲ ಕೇವಲ ಉತ್ತರ ಕೊಡುತ್ತೇವೆಂದರೆ ಪ್ರತಿಭಟನೆ ಮಾಡಿ ಸಭಾತ್ಯಾಗ ಮಾಡುತ್ತೇವೆ.

(ಬಿಜೆಪಿ ಸದಸ್ಯರಾದ ಶ್ರೀ ಈಶ್ವರಪ್ಪ ಮತ್ತು ಶ್ರೀ ನಾರಾಯಣರಾವ್ ಮನಹಳ್ಳಿ ಅವರು ಸಭಾತ್ಯಾಗ ಮಾಡಿದರು)

(ಆ) ಗ್ರಾಮಾಂತರ ಪ್ರದೇಶಕ್ಕೆ ವಿದ್ಯುತ್ ಸರಬರಾಜು ಮಾಡುವ ಬಗ್ಗೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೇ, ಮೊನ್ನೆ ದಿವಸ ತಮಗೆ ಪತ್ರ ಬರೆದು ಕಳುಹಿಸಿದ್ದೇನೆ.

ಅಧ್ಯಕ್ಷರು : ತಾವು ಕಳುಹಿಸಿದ ಪತ್ರವನ್ನು ನೋಡಿದ್ದೇನೆ. ಅದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಸಿ. ಬೈರೇಗೌಡ : ಉಪ ಮುಖ್ಯಮಂತ್ರಿಗಳು ಇರಲಿಲ್ಲ. ಅವರಿಗೆ ಸಂಬಂಧಪಟ್ಟ ಹಾಗೆ ಹೇಳಿಕೆ ಕೊಡಿಸುತ್ತೇನೆಂದು ಲೋಕೋಪಯೋಗಿ ಸಚಿವರು ಹೇಳಿದ್ದರು. ವಿಷಯ ಏನೆಂದರೆ, ರೈತರಿಗೆ .....

ಅಧ್ಯಕ್ಷರು : ತಮ್ಮ ಪತ್ರಕ್ಕೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದೇನೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ : ಅನಾವಶ್ಯಕವಾಗಿ ನಾನು ಹೇಳುವುದಿಲ್ಲ. ರೈತರಿಗೆ ಇವತ್ತಿನ ದಿವಸ ವಿದ್ಯುತ್ ಒದಗಿಸತಕ್ಕ ಪರಿಸ್ಥಿತಿ ದಿನದಿನಕ್ಕೆ ಶೋಚನೀಯವಾಗುತ್ತಿದೆ.

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿದ್ದೆ. ಉಪಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಉತ್ತರ ಕೊಡುತ್ತಿದ್ದರು. ಆಗ ತಾನೇ ಸಭೆಗೆ ಆ ವರದಿ ಬಂತು. ಉಪ ಮುಖ್ಯಮಂತ್ರಿಗಳು ಅಲ್ಲಿದ್ದಾರೆ, ಅವರಿಗೆ ನಾನು ತಿಳಿಸುತ್ತೇನೆ, ಇದನ್ನು ಕೊಟ್ಟಿದ್ದಾರೆ ಅಂದೆ. ಹೇಳಿಕೆ ಕೊಡಿಸುತ್ತೇನೆಂದು ನಾನು ಹೇಳಿಲ್ಲ. ನಾನು ಅವರ ಗಮನಕ್ಕೆ ತರುತ್ತೇನೆ ಅವರು ಅಲ್ಲಿದ್ದಾರೆಂದು ಹೇಳಿದೆ.

ಶ್ರೀ ಸಿ. ಬೈರೇಗೌಡ : ದಿನ ಕಳೆದಂತೆ ವಿದ್ಯುತ್ ಪರಿಸ್ಥಿತಿ ಗ್ರಾಮಾಂತರ ಪ್ರದೇಶಗಳಲ್ಲಿ ಸಂಪೂರ್ಣವಾಗಿ, ಹಾಳಾಗುತ್ತಿದೆ. ನಾವು ಹಳ್ಳಿಗಳಲ್ಲಿ ಓಡಾಡುವ ಹಾಗೆ ಇಲ್ಲ. ಅದಕ್ಕೋಸ್ಕರ ಸದನದ ಸಮಿತಿ ರಚನೆಯಾಯಿತು. ಸದನದ ಸಮಿತಿ ತಾತ್ಕಾಲಿಕ ವರದಿ ಕೊಟ್ಟಿದೆ. ಆ ವರದಿಯನ್ನು ತಕ್ಷಣ ಜಾರಿಗೆ ಕೊಡಬೇಕೆಂದು ಮೊನ್ನೆ ದಿವಸ ಮನವಿ ಮಾಡಿದ್ದೇವೆ. ರೈತರ ಬಗ್ಗೆ ಕಾಳಜಿ ಇರತಕ್ಕವರು ಉಪ ಮುಖ್ಯಮಂತ್ರಿಗಳ ಕೈಯಲ್ಲಿ ಈ ಇಲಾಖೆ ಇದೆ. ರೈತರನ್ನು ಉಳಿಸತಕ್ಕ ಪ್ರಯತ್ನವನ್ನು ತಾವು ದಯವಿಟ್ಟು ಮಾಡಿ. ಪಟ್ಟಣ ಪ್ರದೇಶಕ್ಕೂ ಗ್ರಾಮಾಂತರ ಪ್ರದೇಶಕ್ಕೂ ಇರತಕ್ಕ ವ್ಯತ್ಯಾಸದಿಂದ ಗ್ರಾಮಾಂತರ ಪ್ರದೇಶಕ್ಕೆ ಏನು ಅನ್ಯಾಯ ನಡೆಯುತ್ತಿದೆ ಅದನ್ನು ಸರಿಪಡಿಸಬೇಕಾದ ಅವಶ್ಯಕತೆ ಇದೆ. ಅವರನ್ನು ನಾನು ಅನೇಕ ಸಾರಿ ಖುದ್ದಾಗಿ ಭೇಟಿಯಾಗಿದ್ದೇನೆ. ಅವರಿಗೆ ಸಹಾನುಭೂತಿ ಇದೆ, ಎಲ್ಲ ಇದೆ. ದಯವಿಟ್ಟು ಬೇಗನೆ ಕ್ರಮ ತೆಗೆದುಕೊಂಡು ಆ ವರದಿಯನ್ನು ತಕ್ಷಣ ಜಾರಿಗೆ ಕೊಡಬೇಕಾದ ಅವಶ್ಯಕತೆ ಇದೆ ಎಂದು ಕೈಜೋಡಿಸಿ ಬೇಡುತ್ತೇನೆ. ದಯವಿಟ್ಟು ಅದನ್ನು ಮಾಡಿ.

ಶ್ರೀ ಎಸ್. ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈ ಸದನದ ಸಮಿತಿಯವರು ಮಾಡಿರತಕ್ಕ ಶಿಫಾರಸ್ಸುಗಳು ನಮಗೆ ತಲುಪಿದೆ. ಇದೇ ದಿಕ್ಕಿನಲ್ಲಿ ನಮಗೆ ರಾಮಗೊಂಡಂ ಪವರ್ ಸ್ಟೇಷನ್‌ನಿಂದ, ಸೆಂಟ್ರಲ್ ಇನ್‌ಸ್ಟಲೇಷನ್‌ನಿಂದ ಬರತಕ್ಕ ವಿದ್ಯುಚ್ಛಕ್ತಿ ಮೌಲ್ಯ ಬಹಳ ಕಡಿಮೆ ಇರತಕ್ಕದ್ದನ್ನು ಆಂಧ್ರ ಸರ್ಕಾರದ ಜೊತೆಯಲ್ಲಿ ಚರ್ಚೆ